

# ಮುತ್ತುಪಣೆ

ಕವಿತೆಗ

ಕಣಜಾಲ್ ಪೂವಯ್ಯ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

# ಮುತ್ತು ಮಣಿ

ಕವಿತೆಗ

ಕಣಜಾಲ್ ಪೂವಯ್ಯ

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ
ಮಡಿಕೇರಿ

Decennial Year Publication Series 2021

**ಮುತ್ತು ಮಣಿ**
**Muttu Mani**
Collection of Poems

Written by
**Kanajal Poovaiah**
Kudloor, Chettalli
Mobile: 8762346750

**ಸಲಹಾ ಸಮಿತಿ :**
ಶ್ರೀ ಲಕ್ಷ್ಮೀನಾರಾಯಣ ಕಜೆಗದ್ದೆ
ಶ್ರೀಮತಿ ಸ್ಮಿತಾ ಅಮೃತರಾಜ್
ಡಾ. ವಿಶ್ವನಾಥ ಬದಿಕಾನ
ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ
ಶ್ರೀ ಭರತೇಶ ಅಲಸಂಡೆಮಜಲು

ಪ್ರಕಟಣೆ :
**ರಿಜಿಸ್ಟ್ರಾರ್**
**ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ**

ಪುಸ್ತಕ ದೊರೆಯುವ ಸ್ಥಳ :
**ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ**
ಕಾಫಿಕೃಪ ಬಿಲ್ಡಿಂಗ್, ರಾಜಸೀಟ್ ರಸ್ತೆ, ಮಡಿಕೇರಿ
ದೂ: 08272–223055, ಮೊ : 6362522677
arebaseacademy@gmail.com, www.arebasheacademy.gov.in

ಪ್ರಕಟಣೆಯ ವರ್ಷ : 2021



ಪುಟಗಳು : 88
ಬೆಲೆ : ರೂ. 70
ಪ್ರತಿಗಳು : 300

ಆಕಾರ : ಡೆಮಿ 1/8
ಕಾಗದ : 80 ಜಿಎಸ್ಎಂ ಮ್ಯಾಪ್ಲಿತೋ
ಮುಖಪುಟ ವಿನ್ಯಾಸ : **ದಿನೇಶ್ ಹೊಳ್ಳ**

ಪುಟವಿನ್ಯಾಸ ಮತ್ತು ಮುದ್ರಣ
**ಆಕೃತಿ ಪ್ರಿಂಟ್ಸ್**
ಲೈಟ್‌ಹೌಸ್ ಹಿಲ್ ರಸ್ತೆ, ಮಂಗಳೂರು – 575 001
ದೂ: 0824 2972002

# ಅಧ್ಯಕ್ಷರ ಮಾತು

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಪುಸ್ತಕ ಪ್ರಕಟಣೆಯ ಯೋಜನೆ ಅಡಿಲಿ ಶ್ರೀ ಕಣಜಾಲ್ ಪೂವಯ್ಯ ಅವರ 'ಮುತ್ತು ಮಣಿ'ಂತೇಳುವ ಕವನ ಸಂಕಲನ ಪ್ರಕಟ ಆಗುತ್ತಿರುದ್ ಕುಸಿನ ಸಂಗತಿ. ಅರೆಬಾಸೆ ಸಾಹಿತ್ಯದ ಪದ್ಯಗಳ ಜೊಂಪೆಗೆ ಇದೊಂದು ಹೊಸ ಸೇರಿಕೆ. ಅರೆಬಾಸೆ ಸೊಗಡ್, ಪೊರ್ಲುನ ನಾವು ಕಣಜಾಲ್ ಪೂವಯ್ಯನವರ ಸಂಕಲನಲಿ ಕಾಣಕ್. ಅರೆಬಾಸಿಕ ಸಮುದಾಯ, ಅಲ್ಲಿನ ಬೊದ್ಕುನ ಲೋಕದ ಚಿತ್ರಣ ತುಂಬಾ ಸುಲಭ ರೀತಿಲಿ ತಮ್ಮದೇ ದಾಟಿಲಿ ಕಟ್ಟಿಕೊಡುವ ಪ್ರಯತ್ನನ ಮಾಡಿಯೊಳೊ. ಸಂಸ್ಕೃತಿಯ ಬಗ್ಗೆ ಇರ್‌ವ ಪ್ರೀತಿ, ಅಭಿಮಾನ ಬದಲಾಗ್‌ತ್ತಿರುವ ಪರಿಸರದ ಬಗ್ಗೆ ಹೆದ್ರಿಕೆ, ಕೂಡಿ ಬಾಳ್ತಿದ್ದ ದಿನಗ ಇವರ ಪದ್ಯಲಿ ಕಾಂಬಕೆ ಸಿಕ್ಕಿದೆ. ಪಂಡ್‌ಗೆ ಸೇರಿ ಹೋದ ಆ ಕಾಲ ಮತ್ತೆ ಬಂದ್‌ನಿತ್ತ ಈ ಕಾಲದ ನಡುಲಿ ನಿತ್ತ್ ನೋಡಿಕಂಡ್ ತಮ್ಮ ಮೊನ್ಸ್‌ನ ಭಾವಕ್ಕೆ ಇಲ್ಲಿ ಕವಿತೆಯ ರೂಪು ಕೊಟ್ಟೊಳೊ.

ಒಟ್ಟಾರೆಯಾಗಿ ಅರೆಬಾಸಿಗರ ಜೀವನ ವಿಧಾನ, ಸಂಸ್ಕೃತಿಯ ಪಲ್ಲಟ ಇಲ್ಲಿ ಹಿಡಿದಿಟ್ಟೊಳೊ. ಇವರ ಪದ್ಯಗಳಲಿ ಅರೆಬಾಸೆನ ಲಯ, ನಾದ ಉಟ್ಟು. ಹಂಗೆ ರಾಗ ಹಾಕಿ ಹಾಡುವಂಗೆ ಕೂಡ ಉಟ್ಟು. ಹಂಗಾಗಿ ಕಣಜಾಲ್ ಪೂವಯ್ಯನವರ ಈ ಕವನ ಸಂಕಲನ ಜನರ ಮೊನ್ಸ್‌ಲಿ ಬಾಳ ಕಾಲ ಉಳ್ದರೆ ಮತ್ತೆ ಅದೆಷ್ಟೋ ಬರಹಗಾರರಿಗೆ ಬರಿಯಕೆ ಪ್ರೇರಣೆ ಒದಗಿಸಿದೆ ಅಂತ ನಾವು ಗ್ರೇಸಿಕಂಡವೆ.

**ಲಕ್ಷ್ಮೀನಾರಾಯಣ ಕಜೆಗದ್ದೆ**

# ಮನದಾಳದ ಮಾತ್

## ಮುತ್ತುಮಣಿ ಪೋಣ್ಸಿಕೆ ಮುನ್ನ...

"ನುಡ್ದರೆ ಮುತ್ತಿನ ಹಾರದಂಗಿರೊಕು' ಪದ ಶಬ್ದಗ 'ಮುತ್ತುಮಣಿ'ಗಳಂಗಿರೊಕು. ಆ ಮುತ್ತುಮಣಿಗಳೇ ಅರೆಬಾಸೆನ ಪದಗ.

ನಮ್ಮ ಈ ಅರೆಬಾಸೆನ ಉತ್ಕಟತನಕೆ ಈ ಸಂಕಲನ ಸಾಕ್ಷಿ ಆದೂಂತ ನನ್ನ ಅನ್ಸಿಕೆ. ಈ ನನ್ನ ಮುತ್ತುಮಣಿಗಳ ಚುರ್ದ್ ಮಾಲೆ ಮಾಡಿಕೆ ಸಹಕರಿಸಿದವುಕೆಲ್ಲಾ ನನ್ನ ಅನಂತ ಅನಂತ ವಂದನೆಗ.

ಕಾವ್ಯ–ಕವನ–ಕವಿತೆಲಿ ಬರ್ವ ಪ್ರತಿಯೊಂದು ಪದ, ವಾಕ್ಯಗ ತನ್ನದೇ ಆದ ನಿಗೂಢಾರ್ಥ ಹೊಂದಿದ್ದದೆ. ಅದ್ ಕವಿ ಮನ್ಸ್‌ಗಳಿಗೆ ಮಾತ್ರ ಅರ್ಥ ಆಗ್ವಂತದ್. ಅರ್ಥಗರ್ಭಿತ ಪದಗಳ ಅರ್ಥೈಸಿ ಬರಿವ ಮುಟ್ಟ ನಾನ್ ತಲ್ಪಿತ್‌ಲ್ಲೆ. ಶರ್ರಕೆ ವಯಸ್ಸಾದರೂ ಬರವಣಿಗೆ ಇನ್ನೂ ಕೂಸು.

ನನ್ನ ಈ ಕವನ ಸಂಕಲನ ಸರಳ, ಸಾಮಾನ್ಯ ಜನಗಳಿಗೂ ಅರ್ಥ ಆಗುವಂಗೆ ಮನದಾಳದ ಭಾವನೆಗಳ್ನ ಹಂರ್ಡಿ ಕೊಂಡೊಳೆ. ಇಲ್ಲಿ ಕೆಲ್ವು ಕೇಳಿ ತಿಳ್ಕಂಡ ನೈಜ ವಸ್ತುಸ್ಥಿತಿಗ, ಸ್ವಾನುಭವ. ಕೆಲ್ವು ಹೃದಯಾಳಂದ ಉಕ್ಕಿ ಬಂದ ದುಃಖದ, ರೋಷದ, ಆವೇಶದ ದೇಶಪ್ರೇಮ, ಪ್ರೇಮ ಪರಿಣಯ, ಪ್ರಕೃತಿ ಮತ್ತೆ ಕೆಲ್ವು ವಿಡಂಬನೆಗ ಉಟ್ಟು. ಈ ಎಲ್ಲಾ ತೂಕದ ವಸ್ತುಗಳ ಅಕ್ಷರ ರೂಪಲಿ ಬರ್ದ್ ಓದುಗ ಬಂಧುಗಳಾದ ಎಲ್ಲಾ ಹದ್ನೆಂಟ್ ಗೋತ್ರದ ನೆಂಟ್ರ್‌ಗ, ಸಿನೇತರ್‌ಗ ಮತ್ತೆ ಅಭಿಮಾನಿಗಳ ಎದ್ರ್ ತಾಕೆ ಪ್ರಯತ್ನಪಟ್ಟೊಳೆ. ಇದನ ಹೃದಯಪೂರ್ವಕ ಸ್ವೀಕರ್ಸಿ ಪ್ರೋತ್ಸಾಹಿಸೊಕುತ ನನ್ನ ಆಶಯ.

ನಂಗೆ ಬರ್ಯರ್ಕೆ ಪ್ರೇರಣೆಂತೇಳ್ರೆ ಚೆಟ್ಟಳ್ಳಿ ಪ್ರೌಢಶಾಲೆನ ಅಂದ್‌ನ ನನ್ನ ಕನ್ನಡ ಗುರುಗಳಾದ ಅಂಬೆಕಲ್ ಪುಟ್ಟಣ್ಣ ಗೌಡ ಮಾಸ್ಟ್ರ (1970) ಅವರ ಬೋಧನಾ ವೈಖರಿ, ಸರಳ ಸಜ್ಜನಿಕೆ ಗುಣ ಮತ್ತೆ ಆಗನ ಹುಡುಗು ಪ್ರಾಯದ ನಾಚಿಕೆ ಸ್ವಭಾವ ನಮಿಗೆ ತುಂಬಾ ಹಿಡ್ಸ್‌ತಿತ್ತ್. ಈ ಸಂದರ್ಭಲಿ ಅವ್ಕೆ ನನ್ನ ಹೃದಯ ತುಂಬಿದ ನಮನಗಳ ಅರ್ಪಿಸ್ತೊಳೆ.

ನನ್ನ ಸುಮಾರ್ ವೊರ್ಸದ ಕನ್ಸ್‌ನ ನನ್ಸ್ ಮಾಡೊದ್ವು ಕರ್ನಾಟಕ ಅರೆಬಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿನ ಅಧ್ಯಕ್ಷರಾದಂತಹ ಲಕ್ಷ್ಮೀನಾರಾಯಣ ಕಜೆಗದ್ದೆನವು ಹಂಗೆನೇ ಅಕಾಡೆಮಿನ ಎಲ್ಲಾ ಸದಸ್ಯರ ಸಹಕಾರಂದ, ಅಕಾಡೆಮಿನ ರಿಜಿಸ್ಟ್ರಾರ್ ಚೆನ್ನಸ್ವಾಮಿ ಅವಂರ್ದ ಈ ಕವನ ಸಂಕಲನ ಬೆಳ್ಕ್ ಕಂಡುಟು. ಹಂಗೆನೇ ಬರಹಗಳ್ನ ತಿದ್ದಿ ಅಚ್ಚಿಗೆ ಹೋಕೆ ಸಹಾಯ ಮಾಡ್ದ ಎಲ್ಲಾ ತಂತ್ರಜ್ಞರಿಗೂ ನನ್ನ ಹೃದಯಪೂರ್ವಕ ವಂದನೆಗ.

ಒಂದೊಂದು ಜಾಗೆಗೆ ಅದರ್ದೆ ಆದ ಭಾಷಾವೈವಿಧ್ಯ ಉಟ್ಟು. ಅದ್ ಕನ್ನಡ್ ಜಿಲ್ಲೆ ಆಗಿರ್ದು, ಕೊಡಗ್ ಆಗಿರ್ದು ಇಲ್ಲರೆ ದೇಶದ ಬೇರೆ ಕಡೆ ಆಗಿರ್ದು, ಬರ್ದ ರಚನೆಗಳ ತಿದ್ದಿಕಂಡ್ ಓದುದು ಓದುಗನ ಧರ್ಮ.

ಅರೆಬಾಸೆಲಿ ಬರ್ಯರ್ಕೆ ನನ್ನ ಬೆನ್ನ್ ತಟ್ಟಿ ಪ್ರೋತ್ಸಾಹ ಕೊಟ್ಟಂತ ಮಹಾನ್ ಲೇಖಕ ಬಾರಿಯಂಡ ಜೋಯಪ್ಪನವು, ಕುಡೆಕಲ್ ಸಂತೋಷ್‌ನವು ಅಂಚೆಮನೆ ಸುಧಿ ಕುಮಾರ್‌ನವು ಪೇರಿಯನ ಜಯಾನಂದನವು ವಿನೋದ್ ಮೂಡಗದ್ದೆನವು, ಕಡ್ಲೇರ ತುಳಸೀ ಮೋಹನ್‌ನವು, ಇವ್ಕೆ ಎಲ್ಲಾ ನನ್ನ ಅನಂತ ಅನಂತ ಧನ್ಯವಾದ ವಂದನೆಗಳ್ನ ಅರ್ಪಿಸ್ತೊಳೆ.

1–9–2021


**ಕಣಜಾಲ್ ಪೂವಯ್ಯ**
ಚೆಟ್ಟಳ್ಳಿ
8762346750
8861160622

# ಪುಟನೋಟ


- ಸ್ವಾಮಿನ ನೆನ್ಯೋಕು 11
- ಹರ್ಸವೆ – ಗುಡಿ – ಗುಂಡ 12
- ಅರೆಬಾಸೆನ ಬೆಳ್ಗೊಕು 13
- 'ಡ್ರಗ್ಸ್'ಂತೇಳ್ವ ವಿಷಬೇಲಿ 14
- ದಂಡ್‌ಲಿರ್ವ ನಮ್ಮ ಹೈದಂಗೊಂದು ಹಾರೈಕೆ 15
- ಹೈದಾ... ಏಳ್ ಎದ್ದೇಳ್ 16
- ಹುಟ್ಟುಗುಣ 17
- ಪ್ರೀತಿ ಹುಟ್ಟಿದ್ 18
- ಕಂಡವರ ಪಿಂಡ 19
- ಬೇಡ ಹೊಟ್ಟೆ ಕಿಚ್ಚ್ 20
- ಪಾಷಾಣ ಮೂರ್ತಿ ನಮ್ಮವ್ವ 21
- ಬಸ್ವನ ಬದ್ಕ್ 22
- ನೆರೆ (ಪ್ರವಾಹ) 23
- ಆಟಿ ತಿಂಗ ಭಾರಿ ಭಂಗ 24
- ಹಸ್ರ್ ಉಳ್ಸಿ 25
- ಗಂಡ–ಹೆಣ್‌ನ ಸುರುನ ರಾತ್ರೆ 26
- ಗುಡ್ಸ್‌ಲಿಲಿ ನೆಲೆ ಕಂಡೊವು 27
- ಹುತ್ರಿ 28
- ಅವ್ವ ಸಾಯಕನ 29
- ತಬ್ಲಿ 30
- ಓಟು (ಮತ) 31
- 'ಸುಳ್ಳು ನುಡ್ದ್ ಕೊರ್ಗ್ ಬಡ 32
- ಪ್ರೇಮದ ಕೂಂಗು ಸೈನಿಕಂದ್ 33
- ಹಸ್ರ್ ಗುಡ್ಡದ ಬೇನೆ 34
- ಹೆಣ್ಣ್ 35
- ಅಯ್ಯೆ 36

- ಪ್ರೇಮ – ಕಾಮನೆನ ಆ ದಿನ 37
- ‘ಕಣ್ಣಪು’ನೂ... ಕರಿ (ಕಪ್ಪು) 38
- ನನ್ನ ಗೂಡೆ 39
- ಹೂವು 40
- ಕದ್‌ರ್ 41
- ಗೇಂಟಿಸೀರೆನ ಅತ್ತೆ 42
- ಅಂದ್‌ನ ಆಟಿ ತಿಂಗ 43
- ಮುಂಗಾರ್ ಮಳೆ 44
- ಬಿಸ್ಲ್ – ಮಳೆ 45
- ನಾಟಿ ಗದ್ದೆ 46
- ನಾಟಿ ಊಟ 47
- ಹನ್ನೆರ್ಡ್ ತಿಂಗ 48
- ಅರ್ಜುನ ಟ್ಯಾಂಕ್ 49
- ನಿಷ್ಠಾವಂತ ಯೋಧ 50
- ಎದೆ ಒಡ್ಡಿ ನಿತ್ತುಟು ನಮ್ಮ ಹೈದ 51
- ಯೋಧನ ಕನವರಿಕೆ 52
- ದಂಡ್‌ನ ಗಂಡಂಗೆ ಸ್ವಾಗತ 53
- ದೇಶದ ಗಡಿ 54
- ಪೊಯ್ಯೆ ಲೋಕಲಿ ನಮ್ಮ ವೀರ ಹೈದ 55
- ಜಾತಿ ಒಂದೆ ಮನ್ಸ ಜಾತಿ ಇಲ್ಲಿ 56
- ಸುಗ್ಗಿನ ಹಿಗ್ಗ್ 57
- ಅಂದ್ – ಇಂದ್ 58
- ನಮ್ಮ ಹೊತ್ತೊವ್ವು 59
- ಅರೆಬಾಸೆ ಐಸಿರಿ 60
- ನೆಲದ ಬೆಲೆ 61
- ಶಾಲೆ (ಗುರು) 62
- ಕಳ್ಳನ ಮಹಿಮೆ 63
- ನನ್ನ ನೆಲದ ರಕ್ಷಣೆ 64
- ನನ್ನ ಅರ್ಜಿ 65
- ಆಣಿ 66
- ಚೌಕಾಸಿ 67

- ಪಿಟಾಕಿ 67
- ಹನಿಗವನ 68
- ಭಾಸ್ಕರ (ಸೂರ್ಯ) 68
- ನೆಂಪು 69
- ಒಲವು ಮೂಡೊಕು 69
- ಮೂರ್ನೆ ಮೊಕ 70
- ಕುಡ್ಕನ ವ್ಯಸನ 70
- ಇದ್ದದ್ ಇದ್ದಂಗೆ 71
- ಹಣೆಬರ 71
- ರಾಜಕೀಯ ಕಳೆ (ಕಚ್ಚಡ) 72
- ಸೊನ್ನೆ 72
- ಹುತ್ರಿ ನೆರೆ 73
- ಮಂತ್ರಿಗಿರಿ 73
- ಕನ್ನಡ್ ಜಿಲ್ಲೆ 74
- ಕೊಡ್‌ಗ್ 74
- ಕನ್ನೆ ಕಣ್ಣ್ 75
- ವಯ್ಸಿಗೆ ಬಂದೊವ್ಳು 75
- ಕವಿ 76
- ಆತ್ಮ 77
- ಹರ್ಸವೆ 78
- ಕಳ್ದ ಒಂದು ವೊರ್ಸ 79
- ‘ಗಡ’ಂತೇಳ್ರೆ ಎಂತ ಗಡ ! 80
- ಹಳ್ಳಿ ಹೈದಂಗೊಂದು ಕೆಮಿ ಮಾತ್ 81
- ಹೆಣ್ಣ್ ಯಾರಾದರೇನ್ 82
- ನಂಬಿಕಾಕಿಲೆ 83
- ಸೊಂತದ್ ಏನೂ ಇಲ್ಲೆ 83
- ಕೋಂಬರೆ ಸೇರ್ದ ಹೊಸ ಜೋಡಿ 84
- ಮೊದ್ವೆ ಕಾಗದ 85

# ಸ್ವಾಮಿನ ನೆನ್ಯೋಕು

ದೀಪನ ಬೆಳಗೋಕು
ನಂದಾದೀಪನ ಬೆಳಗೋಕು...
ಆದಿಪೂಜಿತ ಗಣಪಂಗೆ ಇಸೋಕು ॥ 2 ॥

ಸಬ್ಬಮ್ಮ ತಾಯಿ
ಶೃಂಗೇರಿ ಶಾರದೆಗೆ ನಮಿಸೋಕು
ಹರ್ಕೆ ಹಣ ಕಟ್ಟೋಕು ॥ 2 ॥

ಕುಲದೇವ್ರು ವೆಂಕಟರಮಣನ
ಸೇವೆ ಮಾಡೋಕು ॥ ಸೇವೆ ॥

ಅಟ್ಟಲಿ ಮುಡ್ಪುನ ಕಟ್ಟೋಕು
ಅದರ ಶುದ್ಧಲಿ ಇಸೋಕು । ಶುದ್ಧ ॥

ಕಲ್ಲುರ್ಟಿ ತಾಯಿಗೆ
ಕೋಲ ಕೋಳಿ ಕೊಡಿಕುಟ್ಟು
ಗುರು ಕಾರೋಣರ್ನ ನೆನ್ಸಿಕುಟ್ಟು ॥ ನೆನ್ಸಿ ॥

ಕಿಡ್ದಾಸ ಹಬ್ಬ ಬಾಕುಟ್ಟು
ಭೂಮಿಗೆ ಎಣ್ಣೆ ಬುಡಿಕುಟ್ಟು
ಎಲ್ಲೊವ್ಕೆ ನಡ್ಸಿಕೆ ಮನ್ಸುಟ್ಟು ॥ ಎಲ್ಲೊವ್ಕೆ ॥

# ಹರ್ಸವೆ – ಗುಡಿ – ಗುಂಡ

ಗುಡಿ ನಮ್ಮ ದೇವ್ರುದ್
ಗುಂಡ ನಮ್ಮ ಸ್ವಾಮಿದ್
ವೆಂಕಟರಮಣನ ದರ್ಶನಕೆ
ದಾಸ ಒಬ್ಬ ಸೇವೆ ಕೊಡಿಕೆ
ಕಲ್ಲ್‌ನು ಅಲ್ಲ, ವಿಗ್ರಹನೂ ಅಲ್ಲ
ಕರ್ದರೂ ಬಂದದೆ, ಸಂಕಟ ಹರ್‍ಸಿದೆ
ವೆಂಕಟ ರಮಣ ಪಾದ ಬೆಳ್ಸಿದೆ
ಭಕ್ತರ ಮೇಲೆ ಬೆತ್ತ ಬಿದ್ದದೆ –
ಮುಡ್ಪುನೊಳಿಗೆ ದೇವರ ಕಾಣಿಕೆ
ಮುಡಿಪಾಗಿಟ್ಟು ಭಕ್ತರ ಅನ್ಸಿಕೆ
ಮುಡ್ಪೇ ಗುಡಿನೂ,
ಮುಗಿಯೊಕು ಜೋಡ್ಸೊಕು
ಕರಕಮಲನೂ
ಶಂಖ, ಜಾಗಟೆ, ಸೇವೆಕೋಲು
ಹರ್ಸವೆ ನಡ್ದದೆ ವರ್ಸೊಲು
ತಿರಾಳ, ದರ್ಸನ ಪೂಜೆ ಆಕುಟ್ಟು
ಭಕ್ತರ್ಗೆ ಬದ್ಕ್ ಕೊಡಿಕುಟ್ಟು
ಸ್ವಾಮಿನ ಕರ್ಯೋಕು
ಕೆಂಚ್ರಾಯ, ಕರಿರಾಯನೂ ಕರ್ಸೊಕು
ಬಲಬಂಟ್ರ ಸೇವೆನು ಮಾಡೊಕು
ಸೇವೆನೂ ಮಾಡೋಕು...

# ಅರೆಬಾಸೆನ ಬೆಳ್ಗೊಕು

ಅರೆಬಾಸೆ ಅರ್ಥಕೋಶ
ಬ್ರಹ್ಮಲಿಪಿನ
ಬ್ರಹ್ಮಕೋಶ
ಬರ್ದ್ ತುಂಬ್ಸಿ
ಜೋಡ್ಸಿಕುಟ್ಟು –

ಅರೆಬಾಸೆ
ನೆಂಪು ಜೊಂಪೆನ
ಹೆಣ್ದ ಸರ್ಮಾಲೆ
ಸಾಹಿತ್ಯ ಸಿರಿನ
ಜೋಮಾಲೆ –

ಕೆಮಿಗೆ ಕೇಳ್ಸಿದೆ
ಅರೆಬಾಸೆನ
ನಾದಾಮೃತ ಧಾರೆ
ನಾವೆರ್ಯೊಕು ಶ್ರಮದ ದಾರೆ

ಅನ್ನಕೆ ನೇಗ್ಲ್ ಹಿಡ್ದೆ
ಅಂದ್...
ಬಾಸೆಗೆ ಮೆದ್ಲ್ ಇಸ್ಸಿದೆ
ಇಂದ್..

ಅರೆಬಾಸೆ ಸಂಸ್ಕೃತಿ ಸಂಗ್ತಿನ
ಬರ್ದ್ ಬೆಳ್ಸಿ ಬೆಳ್ಗಿ
ಬೆಳ್ಸಿಕುಟ್ಟು
ಎಂದೆಂದ್...

# ‘ಡ್ರಗ್ಸ್’ಂತೇಳ್ವ ವಿಷಬೇಲಿ

ನಿಶೆನ ನಶೆಯೇರ್ಕನ
‘ಡ್ರಗ್ಸ್’ಂತೇಳ್ವ
ರಕ್ಕಸನ ಬೆನ್ನ್ ಹತ್ತಿ
ಇದ್ದ ಬದ್ದ ಎಲ್ಲನ
ಕಳ್ಕಂಡಲ್ಲಾ – ನನ ‘ತಮ್ಮಾ’...!!

‘ಡ್ರಗ್ಸ್’ಂತೇಳ್ವ
ಸೂಜಿ
ಕುತ್ತಿ– ಕುತ್ತಿ
ವಿಷಕನ್ನೆ ಆದಲ್ಲಾ ನನ ‘ತಂಗೆ’...!!

‘ಡ್ರಗ್ಸ್’ಂತೇಳ್ವ ವಿಷಜಾಲದ
ಬಲೆಲಿ
ಸಿಗ್ನಿತೆಲ್ಲಾ ನಿನ್ನ ಸುತ್ತ
ಎಲ್ಲಿ ಒಳ ನನ ‘ಮಜ’...!?

‘ಡ್ರಗ್ಸ್’ ನಶೆ ಮೋಜು ಮಸ್ತಿ
ಕಾರಿರ್‍ಲ್ಲನ ಕ್ಷಣ ಹೊತ್ತು
ಜುಂವನ ಅಡವು ಮಡ್ಗಿ
ಗುಂಡಿಗೆ ಬಿದ್ದಲ್ಲೊ ‘ನನ್ನಣ್ಣ’...!!

ಕೌರವನ ಚಕ್ರವ್ಯೂಹಂದ
ಅಭಿಮನ್ಯು ಹೊರಗೆ ಬಂದಂಗೆ
‘ಡ್ರಗ್ಸ್’ಂತೇಳ್ವ ವಿಷಜಾಲಂದ
ದಾಟಿ ಬಾ ನನ ‘ಕಂದಾ’...!!

# ದಂಡ್‌ಲಿರ್ವ ನಮ್ಮ
# ಹೈದಂಗೊಂದು ಹಾರೈಕೆ

ಜನ್ಮಭೂಮಿ, ಭರತಭೂಮಿ
ನಿನ್ನುದರ ಸಾಂಕುವ ಕರ್ಮಭೂಮಿ ।
ಅವ್ವ ಕಾವೇರಿ ಹರಿವ ಪುಣ್ಯಭೂಮಿ
ಜನ್ಮ ನೀಡ್ದ ಅಪ್ಪ-ಅವ್ವ ಬದ್ಕಿದ ಶ್ರೇಷ್ಠಭೂಮಿ ॥ ಶ್ರೇಷ್ಠ ॥

ಅಂದುಂಡ ನಿನ್ನವ್ವನ ಎದೆಹಾಲ್‌ನ ಬಲ
ಅಲ್ಲಿ ದೂರ ಕಂದರಲಿ ಹರಿವ ಜೀವಜಲ ।
ಅಲ್ಲಿ ಆ ಕಡೆನ ತೊರೆ ತೋಡುನ ಗಂ-ಜಲ
ಅದರ್ಲಿ ಸಿಕ್ಕೊಕು ನಿಂಗೆ ಜಂಘಾಬಲ ॥ ಜಂಘಾಬಲ ॥

ಹೊಯ್ಗೆ ಕಾಡ್‌ನ ಆ ಪೊಯ್ಯೆ -
ಹೊದ್ದುಟ್ಟು ಭಾರತಾಂಬೆ ನಿನ್ನಯ್ಯೆ ।
ಹೊಚ್ಚ ಹಚ್ಚ ಹಸ್ರ್ ಸೀರೆ ಹೊದ್ದ್ -
ಹೊತ್ತ್ ನಿತ್ತುಟು ಗಿರಿ - ಶಿಖರ, ಹಿಮಗಡ್ಡೆನ ಈ ಧೀರೆ ॥

ಗಡಿಲಿ ಎಳ್ದ ಬೇಲಿ - ಸರ್ಪಾಳಿ -
ಶತ್ರುನ ಫಿರಂಗಿ - ಗುಂಡುನ ಧಾಳಿ ।
ಧೀರ ಹೈದ ನಿಂಗಾಗಲಿ ಅದ್ ಹೂವುನ ಗಾಳಿ
ಅದೇ ನಿನ್ನ ಬದ್ಕ್‌ನ ಪ್ರಭಾವಳಿ ॥ ಬದ್ಕ್‌ನ ॥

ಇಂದ್ ನೀನ್ ಬದ್ಕಿ ಹೋರಾಡೊಕು
ಬದ್ಕಿ ದೇಶ ಉಳ್ಸೊಕು ।
ಹುತಾತ್ಮ ನಿನ್ನಪ್ಪ! ಹಾಲುಣ್ಸಿದ ನಿನ್ನವ್ವ !...
ಅವರಾತ್ಮಕೆ ಶಾಂತಿ ಸಿಕ್ಕೊಕು ॥ ಶಾಂತಿ ॥

# ಹೈದಾ... ಏಳ್ ಎದ್ದೇಳ್

ಧೀರ, ಶೂರ, ವೀರರ ನಾಡ್‌ಲಿ
ನೀ ಹುಟ್ಟಿದ ಕೂಸು ಅಂದ್...
ಬೆಚ್ಚನೆ ಬಿಸಿ ಹಸಿ ನೆತ್ತರ್‌ನ
ಬೊಟ್ಟು ಬೊಟ್ಟು ಹರೀ ತುಟ್ಟು
ನಿನ್ನ ಮೈಯೊಳಗೆ ಇಂದ್...

ಬಿಸಿ ನೆತ್ತರ್ ಕುದೀತುಟ್ಟು
ಪಾರ ಕಾಯ್ತುಟ್ಟು ದೇಶಸೇವೆಗೆ
ನಿನ್ನ ಹೊತ್ತ್ ನಿತ್ತ ಆ ಭೂದೇವಿನ ರಕ್ಷಣೆಗೆ
ಏಳ್ – ಎದ್ದೇಳ್, ನಮ್ಮ ಹೈದಾ...

ದೇಶ, ಭಾಷೆ, ಜನ ಸಂಸ್ಕೃತಿನ ತಿಳಿಯೆಕ್
ಗಿರಿ, ಹಳ್ಳ, ಬಯ್ಲ್ ಸಾಗರ
ಹೊಯ್ಗೆ ಸಾಗರ, ಹಿಮಗಡ್ಡೆನ ನೋಡಕ್
ದೇಶ ಗಡಿನ ಕಾಯಕ್
ಭಾರತಾಂಬೆನ ರಕ್ಷಣೆ ಮಾಡಿ
ನಿನ್ನ ಶೌರ್ಯ ಮೆರ್ಯಕ್
ನೀ ಹುಟ್ಟಿದ ಮಣ್ಣ್‌ನ ಋಣ ತೀರ್ಸಕ್
ನಿನ್ನ ಭಾಷೆ ಜನಗಳಿಗೆ ಹೆಮ್ಮೆ ಕಾಣ್ಸಕ್
ಏಳ್ – ಎದ್ದೇಳ್ ಹೈದಾ...

# ಹುಟ್ಟುಗುಣ

ಗೂಡೆ – ಬೆಳ್ಳಂಗಾಗಿ
ಬಾಳ ಲಾಯ್ಕಾಗುಟ್ಟು
ಆದರೆ ಗುಣ ನಡ್ತೆ ಹಾಳಾಗಿ
ನಾ–ಲಾಯಕ್ ಆಗಿ ಹೋಗುಟು

ಹೈದ – ಉದ್ದ ದಪ್ಪ
ಕಟ್ಟ್ ಮಸ್ತ್ ಬೆಳ್ದುಟು
ಆದರೆ... ಅಂವಂಗೆ ರೌಡಿಸಂ
ಕೆಟ್ಟ ಚಾಳಿ ಅಂಟಿ ಹೋಗುಟು

ಸೊಸೆ – ಮೊದ್ವೆ ಸುರುಲಿ
ಕೊತ್ತಿನಂಗೆ ಇದ್ದುಟು
ಈಗ ಗಂಡನ ಮಾತಿಗೆ
ಕೋತಿನಂಗೆ ಕುಣೀತುಟು

ಅತ್ತೆ ಸೊಸೆ ಸುರು ಸುರುಲಿ
ನೀರ್ – ಮೀನ್ ಆಗಿದ್ದುಟು
ಈಗ ಅವರ ಮಧ್ಯ
ಸುರು ಸುರು ಬತ್ತಿ ಹೊತ್ತಿದಂಗುಟ್ಟು

ಜೀವ್ನಂತೇಳ್ರೆ ಮನೆ ಸಂಪ್ಸಾರ
ಹೊಂದಿಕಂಡ್ ಹೋಕುಟ್ಟು
ಆದರೆ ಅದ್ನ ಸವಾಲ್‌ಂತೇಳಿ
ನಡ್ಸಿ ತೋರ್ಸಿಕಂಡ್ ಹೋಕುಟ್ಟು ॥

# ಪ್ರೀತಿ ಹುಟ್ಟಿದ್

ಆ ಜಂಬರಲಿ, ಐಮರ ತಲೇಲಿ
ಕುದ್‌ಕಂಡಿದ್ದ ನೀನ್...
ನಿನ್ನ ಕಣ್ಣ್ ನಿಂಗೆ ತಿಳಿಯದಂಗೆ
ಕುಡಿನೋಟ ನೋಡ್ತಿತ್ ನನ್ನ
ನಿನ್ನೆಲ್ಲಾ ಒನಪು ವಯ್ಯಾರಕೆ
ಮನಸೋತ ನಾನ್
ನನ್ನೆಲ್ಲಾ ಭಾವನೆಗಳ ಹರ್ದ್ಕಂಡೆ
ನಿನ್ನ ಮುಂದೆ ಮನ್ಸೊಳಿಗೆ –

ಜಂಬರದ ಊಟದ ಸಾಲ್
ನೀ ನಿತ್ತೊಳ ನಂಗೆ ತಾಂಗಿ
ನನ್ನ ಕಿಣಿ ಬೆರ್ಲ್ ನಂಗೆ ಹೇಳದೆ
ನಿನ್ನ ಮೈ ಮುಟ್ಟಿ ಮುದ್ರಿಕಂಣ್ತ್
ಬೆರ್ಲ್, ಮೈನ ಲಾಸ್ಯ ನನ್ನೊಳಗೆ –
ಸ್ನೇಹದ ಮಿಂಚ್ ಮಿಣ್ಕೆ ಪ್ರೀತಿ ಹುಟ್ಟಿತ್
ಕಣ್ಣ್‌ಲಿ ಹುಟ್ಟಿದ ಪ್ರೀತಿ
ಹೃದಯಲಿ ಮೊಳ್ತ್–ಬೆಳ್ದ್
ಚಿಗ್ರಿ ಚಿರಾಯು ಆಗಲಿ...॥

# ಕಂಡವರ ಪಿಂಡ

ಹೊತ್ತ್ ಹೆತ್ತೊವ್ವು ಅಯ್ಯೆ
ಇವ್ಳು ಸನ ಅದರ್ಲಿ ಒಬ್ಳು
ಹಾದರ ಅಲ್ಲ, ಕಂಡವರ ಪಿಂಡ
ಹೆತ್ತಯ್ಯೆ ಒಬ್ಬೆ ಕೂಸುನ ಪ್ರಪಂಚ

ಹೆರಿಗೆ ಬೇನೆ, ಕಿರ್ಚಾಟ ಇಲ್ಲೆ
ಸದ್ದಿಲ್ಲದೆ ಭೂಮಿಗೆ ಬಿದ್ದ ಕೂಸು
ಮಾಸದ ಮುದ್ದೆನ ಜಾತಿ ಇಲ್ಲದ
ಹಸುಗೂಸುನ... ಜುಂವ...

ಮರ್ಟ ಬಾಯಿನ ಪೊತ್ತಿ ಹಿಡ್ದ
ಆ ಹೆತ್ತಯ್ಯೆನ ಕೈ ಗಟ್ಟಿ ಆಗ್ತಾ ಹೋತ್
ಮರ್ಡಟ, ಉಸ್ರು ಒಮ್ಮೆಗೆ ನಿತ್ತತ್
ಕೂಸು ಭೂಮಿಗೆ, ಹೆಂಗೆ ಬಾತೊ ಹಂಗೇ ಹೋತ್

ಹೆತ್ತಯ್ಯೆಗೆ ಕಂಡದ್
ಮುನ್ಸಿಪಾಲ್ಟಿನ ಕಸದ ತೊಟ್ಟಿ
ದೇಪ್ರಿತ್ತ್! ದಿಕ್ಕಿಲ್ಲೆ ಎಲ್ಲಾ ಮಾಯ
ಕ್ಷಣ ಹೊತ್ತು... ಹೊತ್ತ್ ಹೆತ್ತ ಕರ್ಲ್
ಒಣ್ಂಗ್‌ತಿತ್ತ್ – ಯಾರಿಗೂ ಗೊತ್ತಿಲ್ಲದಂಗೆ
ಇದ್ ಸನ ಒಂದು ಜುಂವ...!!

# ಬೇಡ ಹೊಟ್ಟೆ ಕಿಚ್ಚ್

ಹೇ ಮೊನ್ಸ ನೀ... ಬುಡು ಹೊಟ್ಟೆಕಿಚ್ಚ್....
ಅದಾಕಿಲೆ ನಿಂಗೆ ಅಚ್ಚ್‌ಮೆಚ್ಚ್ ।
ಬೊದ್ಕಿಕೆ ಬುಡು ಬದ್‌ಕವ್ನ
ಸಾಯಕೆ ಬುಡು ಸಾಯವನ ॥

ಹೇ ಬೇಣ ಆಗ್ಬಡ ನೀ ಕಾಣ
ದೇವ್ರು ಬುಟ್ಟದೆ ನಿಂಗೆ ಬಾಣ ।
ಬಗಿಬಡ ನೀ ದ್ರೋಹ
ಬೆಳ್ಸ್ ನೀ ಸ್ನೇಹ ॥

ಬಗ್ಗ್‌ಸ್ ನೀನೂ ನಿನ್ನ ಮೈ
ಸಿಕ್ಕಿದೆ ನಿಂಗೂ ಬದ್ಕ್‌ನ ಮುಯಿ

ಮೊನ್ಸ ನೀ ಬುಡು ಹೊಟ್ಟೆಕಿಚ್ಚ್
ನೀನಾಗ್ ಜನಗಳ ಅಚ್ಚ್‌ಮೆಚ್ಚ್ ॥

ಮೂರ್ದಿನದ ಬಾಳ್
ನೀನೂ ತಿಳಿ ಬಡವನ ಗೋಳ್

ಬಡಂವನ ಬದ್ಕಿಕೆ ಬುಡು
ಅಂವಂಗು ಉಟ್ಟು ಜುಂವ ಮನೆಮಕ್ಕ ॥

# ಪಾಷಾಣ ಮೂರ್ತಿ ನಮ್ಮವ್ವ

ಕನ್ನಡ್ ಜಿಲ್ಲೆಂದ ಅವತರ್ಸಿದ ಅಮ್ಮ
ಗೌಡುಗಳ ಆರಾಧ್ಯ ದೈವ
ನಿನ್ನ ಕೃಪೆ ಬೇಕು ನಮಿಗೆ ಅವ್ವಾ...

ನಂಬಿದವ್ಕೆ ಇಂಬು ಕೊಡ್ವ ತಾಯಿ
ಕೈ ಮುಗ್ದ್ ಬೇಡಿಕಣೆ ನಿನ್ನ
ನಂಬಿ ಕೆಟ್ಟೋವಿಲ್ಲೆ ನಿನ್ನ

ಗೌಡುಗಳ ಮನೆಲಿ, ಭಕ್ತರ್,
ನೆಲೆ ಕಾಣ್ಸಿ ಇಸ್ಯೊಳೊ ಸಕ್ತರ್
ಚಾವಡಿನೂ ಅಂಗಳಲಿ, ಕಾಯ್ತೊಳೊ ನಿನ್ನ

ಎಡ-ಬಲ ಮೇಲೆ ಕೆಳಗೆ
ಬೇಲಿ ನಿತ್ತ್ ಕಾಪಾಡೊಕು ನಮ್ಮನ
ಪಾಷಾಣಮೂರ್ತಿ ಅವ್ವನೇ...

ಎರ್ಡ್ ಕಾಲ್ ಬೇಟೆ ಕೊಟ್ಟ್
ಬಾರಣೆ ಕೊಟ್ಣೆ ನಿಂಗೆ
ಅಗೆಲ್, ಎಡೆ ಹಾಕಿ ಕೈಮುಗ್ದ್
ನಾ... ನಿತ್ತನೆ...

ಕಾಪಾಡೊಕು - ಮಕ್ಕ ಮರಿಗಳ
ದನ-ಕರ್-ಬಿತ್ತಿದ ಬೆಳೆನ
ಹೋದಲ್ಲಿ, ಬಂದಲ್ಲಿ, ಕೊಟ್ಟಲ್ಲಿ ತಂದಲ್ಲಿ
ಕೃಪೆ ಇಸ್ಸಿ ಕಾಪಾಡೊಕು
ನಿನ್ನೀ ಭಕ್ತರ್ನ... ॥

# ಬಸ್ವನ ಬದ್ಕ್

ಕೆಂಪ ಹೋರಿಗೆ,
ಕಂಪ ಗದ್ದೆಲಿ, ನೇಗ್ಲ್ ಎಳ್ದ್
ಹೆಗ್ಲ್ ಬೇನೆ, ಬಂದ್ ಉಬ್ಬಿಟ್ಟು
ಹಸ್ರ್ ಸೊಪ್ಪುನ ಮೊದ್ದ್ ಅರ್ದ್
ಲೇಪ ಹಾಕಿಟ್ಟು ಆ ಪುಟ್ಟು

ಕಾಲೆಳ್ದ್ ಹೂಣ್ದ ಕಾಲ್ ಕಂಪಲಿ
ಆಗುಟು ಬೇನೆ ಆ ರಂಪಲಿ
ಚಕ್ಕಳ ಕಿತ್ತ್ ಹೋಗುಟ್ಟ್ ನೇಗ್ಲ್
ಗುಳ ತಾಂಗಿ ಕೆಂಪಂದ್ ಜುಂವ

ದಣಿನ ಬಾರ್ಕೋಲು
ಬಾಸುಂಡೆ ಬಂದುಟ್ಟು
ಬಸ್ವನ ಬೆನ್ನ್‌ಲಿ ಬಾರ್ಸಿದ ಗುರ್ತು

ಹಿಂಬೊತ್ತು ಮನ್ಸ ಬಿಸಾಕಿದ
ಬೈಹುಲ್ಲು, ತೋಡುನ ಕನ್ಕ್ ನೀರ್
ಕೆಸ್ರ್, ಗಂಜಳ, ಸೋರುವ
ಬೈಹುಲ್ಲು ಮಾಳಿಗೆ, ಕೊಟಿಗೆ
ಇದ್ ಬಸ್ವನ ಬಂಗ್ಲೆ!

# ನೆರೆ (ಪ್ರವಾಹ)

ಬಾನ ಸೀಳಿಕಂಡ್ ಬಂದ
ಬಾಣದಂಗೆ ಜಲಾಸುರನ
ಝುಳ ಝುಳ ಜಂಬರ
ಭೂಮಿ ತಾಯಿನ ಒಡ್ಲ್ ಬಗ್ದ್
ಬರೆ ಜರ್ಸಿ, ಮರ ಬೀಳ್ಸಿ
ಹೊಸ್ಕಿ ಹೊಸ್ಕಿ ಕೊಸ್ಕಿತ್
ಈ ಬಡ ಜುಂವಗಳ್ನ
ಗೆಯ್ದ ಗದ್ದೆ ಬಯ್ಲ್
ಹಸ್ರ್ ನಾಟಿ ಕಾಣದಾತ್
ಜನ, ದನ, ನೀರ್‌ಪಾಲ್
ಅನಾಚಾರ ಮಾಡ್ದಂವ ನಗರಪಾಲ್
ಹೊತ್ತ್ ಮುಳ್ಗಿ ಹಿಂಬತಾತ್
ಇರ್ಲ್ ಕಳ್ದ್ ಬೆಳ್ಗಾತ್
ದಿನ ಕಳ್ದ್, ವಾರ ತಿಂಗಾತ್
ಹರ್ದ್ ಹೋದ ಭೂಮಿಗೆ
ಅಡೆ ಮಡ್ಗಿದಂಗಾತ್
ಈ ಮೊನ್ಸನ ಬದ್ಕ್

# ಆಟಿ ತಿಂಗ ಭಾರಿ ಭಂಗ

ಎಡೆಬುಡದೆ ಬಿರ್ಸ ಬೀಳ್ವ
ಜಡಿಮಳೆ –
ಭೂಮಿ ಬಾನಕೆ ಕೊಂಡಿ ಇಲ್ಲೆ
ನೀರ್ನ ನೂಲೇಣಿಗ
ಭೂಮಿಗೆ ಬಿದ್ದ್ ಬಟ್ಟೆ ಹೊಲ್ದಂಗೆ
ಹೊಲ್ಕಂಡ್ ಸಾಗಿಟು
ಭೂಮಿ ಪದರನ –

ಸತ್ತವನ ಸುಡಂಗಿಲ್ಲೆ
ಕ್ರಾಪುಗಡ್ಡ ತೆಗಿಯಂಗಿಲ್ಲ
ನುಗ್ಗೆ, ಕೆಸ, ತಿನ್ವಂಗಿಲ್ಲೆ
ಹಬ್ಬ, ಮೊದ್ವೆ ಮಾಡ್ವಂಗಿಲ್ಲೆ?

ಎಲ್ಲದಕ್ಕೂ ಕಾರಣ
ಆಟಿ ತಿಂಗಳ ಎರ್ಚ್‌ಲ್ ಮಳೆ

ಮೊದ್ವೆ ಆದ ಹೊಸ ಹೆಣ್ಣ್
ಹೊಂದಿಕಿಲ್ಲೆ ಹೊಸ ಹೊಸ್ಲ್
ಆ ಊರು ಮಳೆ, ಭೂಮಿ
ಈ ಊರು ಮಳೆ ಕೆಲ್ಸ ಬೇರೆನೇ
ಅದ್ಕೆ ಹೆಣ್ಣ್ ಆಟಿ ಕುದ್ರಿಕೆ
ತೌರಿಗೆ ಹೋಗಿ ಕುದ್ದುಟು.

# ಹಸ್ರ್ ಉಳ್ಸಿ

ಹಸ್ರ್ ಕಾಡ್ ಬೆಳ್ಸಿ ಎಲ್ಲ
ನಮ್ಮ ಹಳ್ಳಿ – ಪೇಟೆಲಿ
ನಮ್ಮ ಸುತ್ತಮುತ್ತ ಹಸ್ರ್
ಅದ್ ನಮಿಗೆ ಉಸ್ರ್
ನೇರ್ಲ ಪೇರ್ಲ ಮಾಯಿನಮರ
ಹಣ್ಣಿಗೆ ಹಲ್ಸ್‌ನ ಮರ
ಶ್ರೀಗಂಧ ಸ್ವಾಮಿಗೆ, ದೇವ್ರುಗೆ
ಹಸಿ ನೆರ್ಲ್ ಜೀವ ಸಂಕುಲಕೆ
ಕಾಡ್‌ಲಿ ಕುಣ್ದಾಡಲಿ
ಮೊಲ, ಜಿಂಕೆ, ಕಡವೆಗ
ಬೇಕು ಮೇವು ಗಜರಾಜಂಗೆ
ಕಾಟಿ, ಕೇಮ ಕುರಿಗಳಿಗೆ
ಬೇಕು ಸುದ್ಧ ಗಾಳಿ, ತೊಂಪು,
ಮೈ–ಮನ್ಸಿಗೆ
ಕಿಚ್ಚ್‌ಲಿ ಕಾಡ್ ಬೆಂದರೆ
ಮೂಕ ಪ್ರಾಣಿಗೆ ಆದು ತೊಂದರೆ
ಬೇನೆ, ಬೇಸ್ರ ಅಳ್ಸ್
ಕಾಡ್ ಬೆಳ್ಸ್, ನಾಡ್ ಉಳ್ಸ್ –

# ಗಂಡ-ಹೆಣ್‌ನ ಸುರುನ ರಾತ್ರೆ

ಅವಳ ವಾರೆ ನೋಟ
ಕಕ್ಕ್‌ಳಿ ಇಸಿಟು ನನ್ನೆದೆಲಿ
ಕಿರ್‌ಕಣ್ಣ್ ಸನ್ನೆ ಮಾಡಿಟು
ಮೈ-ಬೆಗ್ರಿಟು -
ತೊಂಡೆ ತುಟಿ ಕೊಡಿನ ನೆಗೆ
ನನ್ನ ಮನ್ಸ್‌ನ ಹೂವಾಗ್ಸಿಟು
ಅವಳ ಮೆದು ಸ್ಪರ್ಶಕೆ
ನನ್ನ ಮೈ ತಕಧಿಮಿ ಕೊಣ್ಬುಟು
ಬಿಗ್‌ದ್ ಅಪ್ಪಿದ ಹಿಡ್ತಕೆ
ನನ್ನ ಮೈ ಬಿಸಿಯೇರಿಟು
ಅವಳ ಸುರುನ 'ಮುತ್ತು'ಗೆ
ನಂಗೆ ಸೊರ್ಗ ಸಿಕ್ಕಿಟು
ಐದ್ ವೊರ್ಸ ಕಲ್ಪನೆಲಿ ಕೈತೊಳ್ದೆ
ಕಲ್ಪನೆನ ಕನ್ಸ್ ನನ್ಸಾಗಿಟು ಇಂದ್
ಕತ್ತಲೆಲಿಬರ್ದ ಪ್ರೇಮ ಕಾವ್ಯ
ಸಮರಸ ಜೀವ್ನದ ಸುರುನ ಹೆಜ್ಜೆ
ಬಾಳ ಬರ್ದ್‌ಕನ ಬಾಷ್ಯ ಬರ್ದ
ಸುರುನ ರಾತ್ರೆ ಕನ್ಸಲ್ಲ ನನ್ಸ್ !!

# ಗುಡ್ಸಲಿಲಿ ನೆಲೆ ಕಂಡೊವು

ಅತ್ತ ಮನೆನೂ ಅಲ್ಲ ಮಠನೂ ಅಲ್ಲ
ಹುಲ್ಲು ಹೋಸಿದ ಮಾಡ್
ಕುಟ್ಟೆ ಚುರ್ದ ಬೆದ್ರ್ 'ಗಳು'
ಮಣ್ಣ್ ಮೆತ್ತಿದ ಬೆದ್ರ್ 'ನೆರ್ಕೆ'

ಅಂಬ್ಲಿ, ಗಂಜಿ ಬೇಸಿಕೆ ಒಂದು ಮಡ್ಕೆ
ಗೈಪಿಗೊಂದು ಗೊಂದು ಮಣ್ಣ್‌ನ ಚೆಟ್ಟಿ
ಮೊಗ್ಗಿಕೊಂದು ಚಿಪ್ಪಿ ಸೆಡೆ
ಊಟಕೊಂದು ಮಣ್ಣ್‌ನ ಚಟ್ಟೆ

ನೀರ್ ಕುಡಿಯಕೆ ಮುತ್ತುಗ ಎಲೆ ದೊನ್ನೆ
ಮೈ ಮುಚ್ಚಿಕೆ ಅಡೆ ಮಡ್ಗಿದ ಸೀರೆ
ಹಾಸಿ ನಿಲ್ಗಿಕೆ ದಣಿ ಕೊಟ್ಟ ಗೋಣಿಚೀಲ
ಹೊದಿಯಕೆ ಗೌಡ್ತಿ ಕೊಟ್ಟ ಹಳೆ ಸೀರೆ

ಕುಂಡೆ ಬುಟ್ಕಂಡ್ ತಿರ್ಗುವ ಪೋರ, ಪೋರಿಗ
ಮೂಕು ಸೊರ ಸೊರ ಹರ್ದ್
ಮೊಕಲಿ ಮೂಡಿಟು ಚಿತ್ತಾರ
ಯಾರಿಗುಟ್ಟು! ಯಾರಿಗಿಲ್ಲೆ?
ಇವರ ಗುರ್ತು!?

# ಹುತ್ರಿ

ಹುತ್ರಿ ಬಾತ್ ಹುತ್ರಿ
ನೆಲ ಗುಡ್ಸಿ, ಸುಣ್ಣ ಬಣ್ಣ
ಕಂಡೊ ಮನೆ ಮನೆಲಿ
ಅಟ್ಟ–ಅಡಿ ಬಲೆ ತೆಗ್ದ್
ಮಡಿ ಮಾಡ್ದೊ ಮನೆನ

ಚೆಂಡ್ ಹೂವು ಅರ್ಳಿಟು
ಮಾಯಿನೆಲೆ, ಚಿಗ್ರಿಟು
ತೋರಣದ ಪೊರ್ಲು ಹೊಸ್ಲ್ ತುಂಬಿಟು
ಪಿಟಾಕಿನ ಪೆಟಿಗೆ ಬಂದಾಗುಟು

ನೆರೆ ಕಟ್ಟಿಕೆ ದೇವ್ರ ದೀಪ
ಮುಕ್ಕಾಲ್ ಮಣೆ
ಹಸ್ರೆಲೆ, ಅಚ್ಚಿನಾರ್
ತಯಾರಾಗುಟು

ಹೊಸ ಬಟ್ಟೆ ತೊಟ್ಟ್
ಗೂಡೆ– ಹೈದಗ ಮೆರ್ದೊಳೊ
ಗಣ್ಮಕ ಕುಪ್ಪಸದಟ್ಟಿ ಹಾಕೊಳೊ
ಹೆಣ್ಮಕ ಗೇಂಟಿ ಸೀರೆ ಉಟ್ಟೊಳೊ

ಹುತ್ರಿಬಾತ್ ಹುತ್ರಿ
ಹೊಸಕ್ಕಿ ಪಾಯ್ಸದ ಹುತ್ರಿ
ಹುತ್ರಿ ಗೆಣ್ಸ್ ಕಾಳ್‌ಕಡ್ಡಿ
ತಂಬಿಟ್ಟ್ ಅಡಿಕಿಟ್ ತಿಂಬೊನ ಬನ್ನಿ...

# ಅವ್ವ ಸಾಯಕನ

ಇದೆಂತಾ ತಲೆಬರಹ
ಇದ್ ನನ್ನ ಹಣೆಬರ
ಹೌದು ಅವ್ವ ಸಾಯಕನ
ನಂಗೆ ವೊರ್ಷ ಬರೀ ಎರ್ಡ್‌ವರೆ.

ತೊಪ್ಪು ನಂದಲ್ಲ, ಅವ್ವಂದೂ ಅಲ್ಲ
ಅಣ್ಣ–ತಂಗೆದೂ ಅಲ್ಲ
ಜಲ್ಮ ಕೊಟ್ಟ ಅಪ್ಪಂದೂ ಅಲ್ಲ
ಇದ್ ನನ್ನ ಹಣೆಬರ

ಒಂದು ತಿಂಗಳ ತಂಗೆ ಕೂಸು
ಐದ್ ವೊರ್ಸದ ಅಣ್ಣ
ಬೇವುನ ಕಂಯಿ ಇತ್ತ್
ಬೆಲ್ಲದ ಸಿಂಯಿ ಇತ್‌ಲೆ

ಅವ್ವ ಸಾಯಕನ –
ಹಸ್ದಿತ್ತ್ ಹೊಟ್ಟೆ ಬೇಕಿತ್‌ನೀರ್
ತಿಂಗಳ ತಂಗೆನ
ತುಟಿ ಬಾಯಿ ಒಣ್ಗಿತ್ –

ಅವ್ವಂಗೆ ಅದೆಂತದೊ ಚೆನ್ನಿಗಡ
ತಂಗೆನ ಹೆರ್ಗೆಲಿ ಚೆನ್ನಿಮಾರಿ
ಸತ್ತೋತ್‌ಗಡ, ಮತ್ತೆ ಹೇಳ್ದೊಅಪ್ಪ
ಇದೆಲ್ಲಾ ನಮ್ಮ ಹಣೆಬರ

# ತಬ್ಲಿ

ಅವ್ವ ಹೋತ್ ಎರ್ಡ್ವರೆಲಿ
ನಂಗೆ ಐದಾಕ್ನ ಅಪ್ಪ ಕಟ್ಟಿ ಕಣ್ತ್ ಕೂಡೊಳಿ
ಮತ್ತೆ ಕೂಡ್ತ್ಲೆ ನಮ್ಮ ಗದ್ದೆ ಹೊಳಿ

ಹತ್ತ್ ತಿಂಗ ಇದ್ದ್ ಬದ್ಕಿತ್ ನರ್ಕಲಿ
ಮತ್ತೆ ತಂಗೆ ಸನಸೇರ್ತ್ –
ಸತ್ತವ್ವನ ಪಾದಕೆ

ಭೂಮಿಗೆ ಭಾರಂತೇಳ್ವ
ದರಿದ್ರ ಶನಿಂತೇಳ್ವ
ಅವ್ವನ ತಲೆ, ತಿಂದಂತೇಳ್ವ
ಆ ಬೋಜವ್ವನ ಸುಪ್ರಭಾತ
ನಂಗೆ ಹತ್ತಾಕನ
ಅಪ್ಪನೂ ಹೋತ್
ಚಾಂಪ–ಚಾಮೆವನೂ ಇಲ್ಲೆ
ಹೆಂಗೆ ಬದ್ಕಿರ್ವೊ ನಾವು
ಬೋಜವ್ವನೊಟ್ಟಿಗೆ
ಯಾರಿಗೂ ಬರದಿರ್ಲಿ
ಈ ತರದ ತಬ್ಲಿ ಬೊದ್ಕ್
ಕೊಳ್ಚೆ ಗುಂಡಿಲಿ ಹುಟ್ಟಿರೂ
ಹುಟ್ಟಕ್ಕಾಗದ್ ತಬ್ಲಿ ಆಗಿ.

# ಓಟು (ಮತ)

ನಿಮ್ಮ ಒಂದು ಓಟುನ ಬೆಲೆ ಗೊತ್ತುಟ?
ಓಟುನ ಮಾರ್ಕೆಟ್ ತೆಗ್ದುಟು ದೇಶದ್ರೋಹಿ!

ತನ್ನ ಓಟುನ ಮಾರಿಕಂಬಂವ ಚಂಡಾಲ
ಬೆಲೆಬಾಳ್ವ ನಿನ್ನ ಒಂದು ಓಟು
ಹರಾಜಾತ್, ಒಂದು ತುಂಡು
ಒಂದು ಗುಂಡುಗೆ !!

ಸುಳ್ಳು ಆಶ್ವಾಸನೆ ಕೊಟ್ಟ್ –
ಕಳ್ಳ ಸರಾಯ ಕುಡ್ಸಿ
ಕಿಲಂಬು ಕಾಸ್ ಕೊಟ್ಟ್
ಕಡುಬಡವನ ಮಾನ ಹರಾಜಾತ್
ಪಾಪಿಗ ಮಾಡ್ದ ಹಣ ತಿಂದ್

ನಾಡ್ ಮೆಚ್ಚುವ ನಾಯಕನ ಮಾಡಿ
ದೇವ್ರು ಮೆಚ್ಚುವ ಕೆಲ್ಸ ಮಾಡಿ
ನಿಮ್ಮ ಭವಿಷ್ಯ ನಿಮ್ಮ ಕೈಲಿ
ಸರ್ವರ ಬಾಳಿಗೆ ಬೆಳ್ಕ್ ಕೊಡ್ವ
ಒಂದು ಓಟು ಅಮೂಲ್ಯ ಆಗುಟು

# ಸುಳ್ಳು ನುಡ್ದ್ ಕೊರ್ಗ್ ಬಡ

ಹೇ ಮನ್ಸ... ಸುಳ್ಳಾಡಿ ಕೊರ್ಗದಿರ್
ನಿನ್ನ ಸುಳ್ಳು ಮನ್ಸ್‌ನ ನಿಜದ ಕಡೆ ಎಳಿ
ಸುಳ್ಳು ಮನ್ಸ್ – ಮಾತ್ ಮನ್ಸನ
ಅವನತಿಗೆ ದೂಂಕಿ ಪಾಪದ ಕೊಡ್ಪಾನ ಆದೆ.

ನಿಜ ನುಡ್ದ್ ನೀನ್ ನೀನಾಗ್
ನಿನ್ನೊಟ್ಟಿಗೆ ನಿಜ ಇದ್ದರೆ
ನಿಜಕ್ಕೂ ನೀನ್ ಮನ್ಸ
ನಿಜನೇ ನಿಂಗೆ ಸೊರ್ಗದ
ಹೆಬ್ಬಾಗ್ಲ್ ...

ಸಾವ್ರ ನಿಜ ನುಡ್ದ್
ಹತ್ತ್ ಸುಳ್ಳಾಡ್ರೆ
ಹತ್ತಿ ಕಿಲೆ ನಿನ್ನಾತ್ಮ
ವೈಕುಂಠಕೆ

ಸುಳ್ಳು ನುಡ್ದಂವ ಒಮ್ಮೆ
ನಿಜ ಹೇಳ್ರೂ ಬಾಕಿಲ್ಲೆ ನಂಬಿಕೆ
ಜನಗಳಿಗಾದೆ ಅಪನಂಬಿಕೆ
ಅದೇ ಅಂವಂಗೆ ಸುಳ್ಳಾಡಿ
ಕೊರ್ಗಿದ ಅಂಜಿಕೆ.

# ಪ್ರೇಮದ ಕೂಂಗು ಸೈನಿಕಂದ್

ನೀಲ ಬಾನ
ಮಿಣ್ಕ್ ತಾರೆಗ
ಚಂದ್ರನ ಹೊಳ್ಪು
ಪ್ರೇಯಸಿನ ಕಲ್ಪನೆ
ಅದರ್ಲಿ ಒಂದು ತಾರೆ...
ಮನ್ಸ್ ಮಾಲಿಟು
ತಂಗಾಳಿ ತಂಪುಲಿ
ಎದೆ ಗೂಡುಲಿ ಮೂಡಿಟು
ಅವಳ ಕವನ...

ಕೈಲಿ ಹಿಡ್ದ ಕೋವಿ
ಪ್ರೇಯಸಿನಂಗೆ ಗೇನ
ಒಮ್ಮೆ ಬಿಗ್ದ್ ಅಪ್ಪಿ ಮುದ್ದಾಡಿ
ಬಗಲ್‌ಲಿ ಇಸಿಕಣ್ತ್ ತನ್ನಷ್ಟಕೆ
ದೂರಲಿರ್ವ ಪ್ರೇಯಸಿನ
ಬಯ್ಕೆ – ಮನ್ಸ್‌ಲೇ
ಕೊಣಿತಿತ್ ಒಲವಿನ ಆಸರೆಗೆ
ಒಲವ ಕಾವ್ಯ ಬರ್ದಿತ್
ಮನ್ಸ್‌ಲಿ – ಕಣ್ಣ್‌ಲಿ...

# ಹಸ್ರ್ ಗುಡ್ಡದ ಬೇನೆ

ಹಸ್ರ್ ಸೀರೆ ಉಟ್ಕಂಡಿದ್ದ ನಾನ್
ನನ್ನೊಡಲ್‌ಲಿ ಸಕಲಜೀವಜಂತುಗಳ
ಸಾಂಕಿದ ಆ... ನೆಂಪು –
ಇಂದೇಕೆ ಬರೀ ಬೋಳು?

ಬ್ರಹ್ಮಗಿರಿ, ಪುಷ್ಪಗಿರಿ
ರಾಜವೈಭವ ಮೆರೀತಿತ್
ಮಮಕಾರ ಇಲ್ಲದ ಮನ್ಸಂಗ
ಮಂಗಂದ ಕಡೆಗೆಟ್ಟ್ ಹೋದೊ!

ನನ್ನ ಕಡ್ದ್, ತೋಂಡಿ, ಭಾಗ ಮಾಡ್ದೊ
ಹೆತ್ತವ್ವನ ಎದೆ ಸೀಳ್ದಂಗೆ ನರಸತ್ತೊವು!
ನಿಲ್ಲಿಕೆ ದಾತಿಲ್ಲದೆ ಮಾಲಿ ಹೋದೆ
ಹೊಣ್ಕಿ ಬಿದ್ದೆ ಒಂದು ದಿನ
ಪಾಪದವರ ಮನೆ ಮಠಗಳ ಮೇಲೆ

ದೂರಲಿದ್ದ ರೆಡ್ಡಿ, ಚೆಡ್ಡಿ
ಸದ್ದಿಲ್ಲದೆ ಮಾಡ್ದೊ ದುಡ್ಡು
ಒಂದಿಲ್ಲೆ ಒಂದಿನ ಕೊಸ್ಕಿ ಹಾಕಿನೆ
ಮನ್ಸತ್ವ ಇಲ್ಲದ ಆ ಮನ್ಸರ...

# ಹೆಣ್ಣ್

ಅವ್ವ – ಅಕ್ಕ – ತಂಗೆ ಸ್ತ್ರೀಲಿಂಗ ಎಲ್ಲಾ ಹೆಣ್ಣೇ...
ಹೊನ್ನು ಮಣ್ಣ್, ಸಂತಾನಕ್ಕೆ ಬೇಕು ಹೆಣ್ಣ್
ಗಂಡನ ಗಂಡ್ಸ್‌ತನಕೆ ಬೇಕು ಹೆಣ್ಣ್
ಸುಜ್ಯೋತಿ, ಕನ್ನಿಕೆ ಕಾವೇರಿ
ತುಂಗೆ, ಭದ್ರೆ, ಗೋದಾವರಿ
ಗಂಗೆ, ಕೃಷ್ಣೆ, ನರ್ಮದೆ ತರಾವರಿ
ಭೂದೇವಿ ಒಡಲ್
ಕಡಲ್, ಸಾಗರ ಜಲಕನ್ನೆ
ಕೃಷ್ಣನ ಅಯ್ಯೆ ದೇವಕಿ
ಕುಂತೀ ಪುತ್ರ ಅರ್ಜುನ
ಗಂಗೆನ ಮಜ ಭೀಷ್ಮ
ಅಂಜನೀಪುತ್ರ ಹನುಮ
ಪಂಚಪಾಂಡವರ ಹೆಮ್ಮೆನ ದ್ರೌಪದಿ
ಹೆಣ್ಣ್ –
ಮನೆ, ಮನ, ಗಂಡ ಮಕ್ಕಳ
ಮಾನ ಕಾಪಾಡ್ದು ಹೆಣ್ಣ್
ಸಂಪ್ಸಾರ ಗಾಡಿನ ಎಳಿಯಕೆ
ಬೇಕಿಂದ್ ಹೆಣ್ಣ್

# ಅಯ್ಯೆ

ಹೊಟ್ಟೆಗೆ ಬಿದ್ದ ಬೀಜಕೆ
ಜುಂವ ಕೊಟ್ಟ್
ಒಂಬೊತ್ತು ತಿಂಗ ಹೊತ್ತ್
ಹೆತ್ತೊವ್ವು ಅಯ್ಯೆ !

ಎದೆ ಹಾಲ್‌ನ ಅಮೃತ ಕುಡ್ಸಿತ್ ಅಯ್ಯೆ
ನೀನ್ ಹರ್ಕಂಡ್ ಅಂಬೆಗಾಲಿಕ್ಕ್‌ಕನ
ಬೇಕಾತ್ ನಿಂಗೆ ಅವ್ವ ಆಸರೆ
ಕಣ್ಣ್‌ಲಿ ಕಣ್ ಇಸಿ ನೋಡ್ಕಂತಿತ್ ನಿನ್ನಯ್ಯೆ

ಪುಕ್ಕಿನ ಹೊಲ್ಸ್, ಕಕ್ಕ ತೊಳ್ದ್
ಮೈ ಮೀಸಿ ಹೊಗೆಕೊಟ್ಟ್
ತೊಟ್ಲ್ ತೂಗಿ ಲಾಲಿ ಹಾಡ್ದವ್ವು ನಿನ್ನಯ್ಯೆ
ಕಡೆಬಾಯಿ ಆರದಂಗೆ ಕೊಡ್ತಿತ್ ಹಾಲನ್ನ

ತೊದ್ಲ್ ನುಡಿಯಕನ ನೀನ್
'ಅ' ಅಮ್ಮ ಕಲ್ಸಿದೊವ್ವು ನಿನ್ನಯ್ಯೆ
ಹೊಟ್ಟೆ, ಬಟ್ಟೆ ಕಟ್ಟಿ
ಸಾಂಕಿತ್, ಕೂದೊಲು ಬಗ್ಗದಂಗೆ ನಿನ್ನಯ್ಯೆ

# ಪ್ರೇಮ – ಕಾಮನೆನ ಆ ದಿನ

ಅಂದೊಂದಿತ್ ದಿನ
ಅಂತರಂಗಲಿ ತುಂಬಿತ್ತ್
ಪ್ರೇಮ – ಕಾಮದ ತೆವ್ಲ್
ಹೋದಲೆಲ್ಲಾ ಪ್ರೇಮದ ಕಾವುಕಾಚೆಲ್

ನೀ ಬಂದ್ ಹತ್ರ ನಿತ್ತಾಕನ
ನಿನ್ನ ಬೆಗ್ರ್‌ನ ಸಿಂಡ್ ಮೂಂಕುಗೆ ತೊಂಪು
ಆ ನಿನ್ನ ಸಿಟ್ಟ್‌ನ ಮೊಕನೂ
ಹೊಳೀತಿತ್ ಕಾಂತಿನ ಹೊಳ್ಪು

ಅಂದೊಂದಿತ್ ದಿನ
ಕ್ಷಣ ಹೊತ್ತು ನೀ ಕೊಟ್ಟ ಮನ್ಸ್
ಆತಿತ್ ನನ್ನ ಮನ್ಸ್‌ಂತೇಳ್ವ ನವ್ಲ (ನವಿಲು)
ಕಾಮನೆನ ಗರಿಬಿಚ್ಚಿ ಕುಣಿತಿತ್

ಆ ಹದ್ನೆಂಟ್ ಇಪ್ಪತ್ತರ ಪ್ರಾಯ
ಮನ್ಸ್ ಮನ್ಸ್‌ಗಳ ಹರಯ
ಕಣ್ಣ್‌ಲಿ ಕಣ್ಣ್ ಕೂಡಿ ಬೆಗ್ರ್‌ತಿತ್ ಮೈ...
ಕವನ ಹಾಡ್ತಿತ್ ಮನ್ಸ್ ಮೌನಲಿ
ಅಂದೊಂದಿತ್ತ್ ದಿನ...

# ‘ಕಣ್ಕಪು’ನೂ... ಕರಿ (ಕಪ್ಪು)

ನಮ್ಮ ಹೈದ ನೋಡಿಕೆ ಕಪ್ಪು
ಅಂವಂಗೆ ಉಟ್ಟು ಒಳ್ಳ ಮನ್ಸ್
ಗೂಡೆ... ನೀ ಕೊಡು ನಿನ್ನ ಮನ್ಸ್
ಕಪಟ – ವಂಚನೆ ಅಂವಂಗಿಲ್ಲೆ
ಅಂವನಂತಂವ ನಿಂಗೆ ಸಿಕ್ಕಿಕಿಲ್ಲೆ
ಬೇಸಿದ ಸುಣ್ಣಲಿ ನಿಲ್ಲುವ ತಿಳಿನೀರ್ ಸೆಲೆ

ದೀಪದ ಬೆಳ್ಕ್ ಅಂವ
ಅದರಡಿನ ಕತ್ತಲೆ ನೀನ್
ನಿನ್ನ ಬೆಳ್ಗಿಸಿಕೆ ಬೇಕ್ ಅಂವ
ಅಲ್ಲಿ ಬಾಳಿ ಬೆಳ್ಗೊಕು ನೀನ್
ಸ್ವರಕೆ ಸ್ವರಸೇರ್ಸಿ, ಕೈ ಹಿಡ್ದ್
ಒಂದಾಗಿ ಮುಂದೆ ನಡ್ದ್
ಮಲ್ಲಿಗೆ ಸುವಾಸನೆನ ಪಡ್ದ್
ರೆಕ್ಕೆ ಬಿಚ್ಚಿ ಹಾರೊಕು ಜೋಡಿ ಹಕ್ಕಿಗಳಂಗೆ

ಕಪ್ಪು ಕಪ್ಪುಂತಾ ಕೊರಗ್ ಬಡ
ಕೋಗಿಲೆನೂ ಕಪ್ಪೇ
ಕಣ್ಕಪುನೂ ಕಪ್ಪೇ
ಕೋಗಿಲೆ ರಾಗ ಇಂಪು
ಕಣ್ಕಪು ಕಣ್ಣಿಗೆ ತೊಂಪು

# ನನ್ನ ಗೂಡೆ

ಬೋಳು ಬಾನಲಿ ಮಿಣುಕುವ
ಒಂಟಿ ತಾರೆ ನೀನ್...
ಯಾರಿಗಾಗಿ ಕಾಯ್ತೊಳಾ...?
ನಿಂಗೊಂದು ಜಾಗೆ ಉಟ್ಟು
ನನ್ನೆದೆ ಗೂಡುಲಿ...!

ಹೃದಯದ ಭೂಮಿಲಿ
ಸಿನೆಹದ ಬಿತ್ತ್ ಬಿದ್ದುಟು
ಬಿತ್ತ್ ಮೊಳ್ಕೆ ಒಡ್ದ್
ಅರ್ಳುವ ಎರ್ಡ್‌ಲೆ
ನಮ್ಮ ಪ್ರೀತಿನ ಸೆಲೆ...!

ಓಡೋಡಿ ಬಂದ್ ಬುಡು
ನನ್ನೆದೆ ಅಂಗಳಕೆ
ಮಿಣ್ಕ್ ನೀ... ನೀನಿಲ್ಲಿ...
ನಿನ್ನಿಷ್ಟಕೆ
ಈ ಒಂಟಿ ಬಾಳ್‌ಲಿ
ಬೆಳ್ಗುಸೊಕೊಂದು
ದೀಪನಾ...!!

# ಹೂವು

ಗಿಡ ಬೊಳ್ಳಿಲಿ ಅರ್ಳಿದ
ಪೊರ್ಲುನ ಹೂವು ನೀನ್
ದೇವ್ರ ಪಾದ ಮುಡಿಗೂ ಹೂವು
ಹೆಣ್ಣ್‌ನ ಕೂದೊಲು ಪೊರ್ಲಿಗೆ ಹೂವು
ಹೆಣದ ಮೈಗೂ ಬೇಕು ಹೂವು

ಮೊದು ಮಜ, ಮೊದುವಳಿಗೆಗೆ ಹೂಹಾರ
ಅತಿಥಿ ನೆಂಟ್ರ್‌ಗಳಿಗೆ ಗುಲಾಬಿ ಹೂವು
ಹುತ್ರಿ, ಚೌಂಡಿ, ಚಾಮುಂಡಿಗೆ ಚೆಂಡ್ ಹೂವು
ಚೌತಿಗೆ ಬೇಕು ಸೀತೆ ಹೂವು

ಕವಿ ಹೇಳ್ದೆ –
ನೀ ನಡ್ದ ಹಾದಿ ಹೂವುನ ಹಾಸಿಗೆ
ನಿನ್ನ ಗುಣನೆ ಹೂವುನಸ್ಟ್ ಮೆದು
ನಿನ್ನ ಮನ್ಸ್ ಹೂವುನಂಗೆ
ನಿನ್ನ ಕೆನ್ನೆ ಗುಲಾಬಿ ಹೂವು
ಹಾಡಿ ಹೊಗ್ಳುವೆ ಹೂವುನ ಈ ಪರಿನ ...

ಪ್ರಿಯ ಪ್ರಿಯತಮೆಗೆ
ಒಲವುನ ಹೂವು
ಕಣ್ಣುನ ತಣ್ಸಿಕೆ ಬೇಕು
ನೀನೊಂದು ಹೂವು.

# ಕದ್‌ರ್

ಕದ್‌ರ್ ಕಾಂಬ ಕುಸಿ
ಅದ್ರ ಹಿಂದೆ ಉಟ್ಟು ಬೇಗ್ರ್‌ನ ಬಿಸಿ
ಸಳಿ, ಗಾಳಿ, ಮಳೆಗೆ ಅಡ್ರಿದ
ಶರ್‍ರ ಕರ್‍ರಂಗೆ ಕಂದಿಟು ಕಸಿ.

ಹರ್‍ಸಿ ಹರ್‍ಸಿ ನೀರ್‌ನಂಗೆ ಬೇಗ್ರ್
ಕಂಪ ಗದ್ದೆಲಿ ಹೂಣಿ ಕಾಲೆಳ್ದ ಕಾಲ್‌ಗ
ರಪ ರಪ ಬಾರ್ಸಿದ ಬಾರ್‍ಕೋಲು ಪೆಟ್ಟ್
ಹೆಗ್ಲ್ ಬಂದಿತ್ತಂದ್ ಹೋರಿಗೆ
ಆದ್ರು ಎಳ್ದಿತ್ ನೇಗ್ಲ್
ಮುಗ್ರಿಸಿ ಬಿದ್ದೆದ್ದ್ ಅದರ ಪಾಡಿಗೆ

ತಿಂಗ ಮೂರಾತ್ ನಾಟಿ ಹೊಡೆ ಬಸ್ರಿ ಆತ್
ನೋಡವರ ಕಣ್ಣ್ ತಂಪಾತ್
ಹೊಡೆ ತುಂಬಿದ ಪೈರ್
ಭತ್ತ ಕಾಳ್‌ಗಳ ಹೊನ್ನ ಕದ್ರ್
ಇನ್ನೇನ್ ದಾಟಿ ಬರೊಕು ಪೈರ್ ಹೊಟ್ಟೆಂದ

ಬಯ್ಲ್ ಮನೆಗಳ್ಳಿ ಕದ್ರ್‌ನ ಸುದ್ದಿ
ಜನಗಳಿಗೆ ಬಾತ್ ಹಬ್ಬದ ಸುಗ್ಗಿ
ಮುಂದಕೆ ತಿಂಬಕೆ ಹುಗ್ಗಿ.

# ಗೇಂಟಿಸೀರೆನ ಅತ್ತೆ

ಗಿಣಿ ಮಾರ್ಕ್‌ನ ಹಸ್ರ್ ಸೀರೆ
ಅದಿಕೆ ಮ್ಯಾಚಿಂಗ್ ಉದ್ದಕೈ ಜಾಕೀಟ್
ಸೀರೆ ಉಟ್ಟುಟು, ನೆರ್ಗೆ ಮುಂದೆ ಇಸಿಟು

ಚೆಕ್‌ನ ವಸ್ತ್ರ ತಲೆಗೆ ಬಿಗ್ದ್ ಕಟ್ಟಿಟು
ಕೈ ತುಂಬಾ ಹಸ್ರ್ ಬಳೆ ತೊಟ್ಟುಟು
ಕಾಸಗಲ ಬೊಟ್ಟು ಹಣೆಲಿ ಮಿಂಚ್‌ತುಟು
ಕುತ್ತಿಗೆನ 'ಸರ್ಟಡಿ'ಗೆ ತಬ್ಬಿಕುದ್ದುಟು
ಉದ್ದ ಜಡೆ ನೆಯ್ದುಟು
ತಲೆ ಮೇಲೊಂದು ಪಚ್ಚೆ ಕುದ್ದುಟು
ಪೊಕ್ಕೊಳ ರೊಟ್ಟಿ, ಹಲ್ಸ್‌ನಕ್ಕಿ ಪೊಜ್ಜಿ
ಅದರ್ಲಿ ಮಡ್ಗಿಟು
ಕರಿಬೆಲ್ಲದ ಕಾಪಿ ಚೊಂಬುಲಿ ತುಂಬ್ಸಿಟು
ಹಿಂದೆ ಹಿಂದೆ ಬೊಳ್ಳುನಾಯಿ
ಬಾಲ ಆಡ್ಸಿ ಬೊಗ್ಗಿ ಬೊಗ್ಗಿ ಸಾಗಿಟು
ಗದ್ದೆ ಪುಣಿಲಿ ಗೇಂಟಿ ಸೀರೆನತ್ತೆ
ಬೀಸ ಬೀಸ ನಡ್ದ್ ಸಾಗಿಟು

# ಅಂದ್‌ನ ಆಟಿ ತಿಂಗ

ಅಂದೆಲ್ಲಾ ಆಟಿ ತಿಂಗಂತ್ತೇಳ್ರೆ
ಜಡಿಮಳೆ ಬಂದ್, ಬಟ್ಟೆ ಬರೆ ನೆಂದ್
ಮೂಗುಲಿ ಸೊರ ಸೊರ, ದೊಂಡೆಲಿ ಕರಕರ
ಗೌರ್ಮೆಂಟಾಸ್ಪತ್ರೆನ ಕೆಂಪು ಕಸಾಯ ಕುಡ್ದದೇ ಕುಡ್ದದ್ !

ಹೊಳೆ, ಕೆರೆ, ತೋಡು ತುಂಬಿ ತುಳ್ಕುದು
ಗದ್ದೆ ಬಯ್ಲ್, ಏಕ್ಲ್ ಗದ್ದೆ ಹಸ್ರ್ ತುಂಬುದು
ಅಜ್ಜ – ಅಜ್ಜಿಕಳ ಬಾಯಿಲಿ ಬೆಚ್ಚಂಗೆ ಎಲಡಿಕೆ ಕಾಂಬೊದು
ಕತೆಗಳ ಹೇಳ್ಕಂಡ್, ಸುವ್ವಿಸೂವಿ ಹೇಳ್ಕಂಡ್
ಹೆಣ್ಮಕ ಅಗೆನೂ ತೆಗಿಯೋದು –

ಕುಂಬಳ, ಸೋಂತೆ, ಅಟ್ಟಂದ ಇಳ್ದಿತ್
ಗೂಡುಲಿ ಇರ್ವ ಹೂಂಜ ಹೇಂಟೆಗೆ ಆಯ್ಸ ಮುಗ್ದಿತ್.
ಗದ್ದೆಗೆ ಹತ್ತಿದ ಚೆರ್ಗ್, ಕಲ್ಮೊರ ಬೆಸಗೆಲಿ ಒಣ್ಗಿತ್
ಕಕ್ಕಡೆಸ್‌ಂಡ್, ಮಾಯಿನಣ್ಣ್‌ಗೈಪು ಗಮ್ಮತ್.

ಹುಲ್ಲಂಳ್ಬು, ನುಚ್ಚಂಳ್ಬು ಹೆಗ್‌ಲಂಳ್ಬು  ಕಾಚಂಳ್ಬು
ಕಿರ್‌ಬೆದ್ರ್, ಹೆಬ್ಬೆದ್ರ್ ಕಣಲೆನ ಗೈಪುಟ್ಟು
ಹಲ್ಸ್‌ನಕಿ ಪೊಜ್ಜಿ ಪೊಕ್ಕೊಳ ರೊಟ್ಟಿ ಮಾಡಿಟ್ಟು
ಕೂಗಲಿಟ್ಟ್, ಆಟಿ ಪಾಯ್ಸ, ಪತ್ರೊಡೆ ತಿಂಬಕುಟ್ಟು.

# ಮುಂಗಾರ್ ಮಳೆ

ಉರಿಬಿಸ್ಲ್ ತಾಂಗಿ ಕಾದ್ ಕರ್ಟಿಟು
ಭೂಮಿ, ನೆಲ –
ಕರಿಮೋಡದ ರಾಶಿಗ
ಸಾಗ್ತೊಳೊ ನಾ ಮುಂದೆ, ತಾ ಮುಂದೆ ತ –

ಕರಿ ಮೋಡ ಸಾಗಿ ತುಂಡು ತುಂಡಾಗಿ
ಬರ ಬಂದ ನಾಡಿಗೆ
ಬರ ಬರ ಸೇರ್‍ತೊಳೊ
ತರ ತರದ ಸೊಬಗ್‌ಲಿ

ಸಿಡ್ಲ್‌ನ ಮಿಂಚ್, ಗುಡ್ಗ್‌ನ ಅಬ್ಬರ
ಕೇಳಿ ಕುಸಿ ಆತ್ ರೈತಂಗೆ
ಮಿರಿ ಮಿರಿ ಮಿಣ್ಕ್ ಮಿಂಚ್‌ನ

ಬರ ಬರ ಬೀತ್ ಹನಿ
ಜುಳು ಜುಳು ಹರ್‍ತ್ ನೀರ್
ಮೇಲೆದ್ದ್ ಬಂದೊ ನೀರ್ ಮೇಲೆ
ಗುಳ್ಳೆಗ –
ಪಡ್ಡೆ ಮಕ್ಕ ಆಗಿದ್ದೊ ಚಂಡಿ ಮಳೆಲಿ
ಪಚ ಪಚ ಆಡಿಟು ಕೂಸು
ಕೈಬಡ್ದ್ ಕನ್ಕ್ ನೀರ್‌ಲಿ
ಆಡಿ ಕುಣ್ದೊ ಮುಂಗಾರ್ ಮಳೆಲಿ!!

# ಬಿಸ್ಲ್ – ಮಳೆ

ಆಗಷ್ಟೆ ಬಿದ್ದ ಮಳೆಹನಿ
ಮೂಕಡಿರುಟು ಹಸಿಮೊಣ್ಣ್‌ನ ಕಂಪು
ಬಾನ ಮೂಲೆಲಿ ಮೂಡಿಟು
ಕಾಮನ ಬಿಲ್ (ಅಜ್ಜಿ ಬಿಲ್ಲ್) ನ ಸಿಂಗಾರ –

ಧೂಳು, ಮಣ್ಣ್‌ನ ನೆಕ್ಕಿಕೆ
ಮೊಲಗಳ ಕಳ್ಳ ಹೆಜ್ಜೆ ಸಾಗಿಟು ದಾರಿಲಿ
ಗುಂಡಿನ ನಿತ್ತನೀರ್‌ಲಿ
ರೆಕ್ಕೆ ಬಡಿತೊಳೊ ಹಕ್ಕಿಗ

ದಾರಿಲಿ ಸಾಗಿಟು ಜೀಪುನ ಚಕ್ರ ಗುರ್ತ
ಹೊಸ್ಲ್‌ಲಿ ನಿತ್ತ್ ನೋಡಿಟು
ಅವಳಿಷ್ಟಕೆ –
ಪ್ರಿಯಕರನ ಹೆಜ್ಜೆ ಗುರ್ತು

ಗಿಡ ಮರ ಚಿಗ್ರಿಕೆ
ಚಿಗ್ರಿದೆಲೆ ಉಸ್ರಾಡಿಕೆ
ಬಾತ್ ಬಿಸ್ಲ್ ಮಳೆ
ಬರನ ನೀಗ್ಸಿಕೆ –

ಕಾದ ಕಾವ್ಲಿಗೆ ಹೋಯ್ದಂಗಿತ್ ನೀರ್
ಚುಂಯ್ ಗುಟ್ಟಿತ್ತ್ ಕೆಲಕ್ಷಣ ನೆಲ
ಮನ್ಸ್ ಹಗ್ರಾತ್ ಬಾನತ್ತ ನೋಡಿ
ನನ್ನ ಹೃದಯ!!

# ನಾಟಿ ಗದ್ದೆ

ಜೋಡೆತ್‌ಗಳ ಸಾಲ್, ಕೂಡಾಳ್ ಬಂದೊಳೊ
ರಾಂಪಣ್ಣ, ತ್ಯಾಂಪಣ್ಣ, ಬೋಮಣ್ಣ, ರಾಗಣ್ಣ
ತುಕ್ರ–ಐತ–ಕರಿಯ, ಅವುನೂ
ಹೊಡ್ಕಂಡ್ ಬಂದೊಳೊ ಸುಬ್ಬಯ್ಯ ದನಿಗಳ
ಮೂರ್ಜೋಡಿ ಎತ್‌ಗಳ್ನ –

ನೂರು ಬಟ್ಟಿನ ಓಟುಗದ್ದೆ
ಕೆಂದ–ಪಟಯ, ಬೆಳ್ಳಿ – ಕರ್ಯಣ
ಹೋರಿಗ, ಮುದಿಎತ್‌ಗ ಎಳ್ದೊಳೊನೇಗ್ಲ್
ಹೊಳಿ ಬುಟ್ ಹೊಳಿ, ಹರ ಹರ ಹೀ...
ರಾಗ ಹರ್ದುಟು ಗದ್ದೆ ಬಯ್ಲ್ಲಿ...

ಹೂಟೆ ಮುಗ್ತ್ ತಾವೆ ಕಟ್ಟಿದೊ
ತಾವೆಲಿ ಪಳ್ಗಿದ ಎತ್‌ಗಳಿಗೆ
ಗದ್ದೆನೂ ಆತ್ ನಾಟಿಗೆ
ಆಚೆಕರೆ, ಈಚೆಕರೆ ಪೈರಿಗೆ
ಅಗೆ ಕಂತೆ ಹಾರಿ ಕುದ್ದೊಳೊ ನಾಟಿಗೆ

ನಾಟಿ, ಕೊಡಿನಾಟಿ ನಟ್ಟಾತ್
ಹೊಯ್ಯ, ಹಾಡ್ ಹಾಡ್ಯಾತ್
ನಾಟಿ ಓಟ ಓಡ್ಯಾತ್
ನಾಟಿ ಗದ್ದೆ ತುಂಬಿ ತುಳ್ಕಿತ್.

# ನಾಟಿ ಊಟ

ನಾಟಿ ಕೂಡ್ದ ಹೊಯ್ಯ ರಾಗ ತೇಲಿ ಬಂದುಟು
ಅಕ್ಷಿ ಅಕ್ಕನ ಕೆಮಿಗೆ ನಾಟಿಟು
ದಡಬಡ ಕಂಡ್ಬಿಟ್ಟ್ ಕಳ್ಸಿಗೆ ಎತ್ತಿ ಕುಕ್ಕಿತ್
ಗೂಡೆಗೆ ಬೊಯ್ಕಂಡ್.
ನೆರೆಮನೆ ಪಾರುನ ಕರ್ದಾತ್
ಬಾಳೆಲೆ ಕೊಯ್ದ್ ಇಸ್ಯಾತ್
ಕೋಳಿ ಚೆಟ್ಟಿನೂ ರುಚಿ ನೋಡ್ಯಾತ್

ನಾಟಿ ಗಣ್ಮಕ ಬಂದ್ಕಂಡೊ
ಕಾಲ್ ಕೈ ತೊಳ್ಕಂಡೊ
ಅಂವ್ಸರ, ಅಂವ್ಸರ ಕುದ್ಕಂಡೊ
ನಾಟಿ ಗಣ್ಮಕ ಬಡ್ಕಂಡೊ
ಬರ್ಲಿಂತೇಳಿ ಬಟ್ಟೆ ಸರಾಯಕೆ ಕೇಳ್ಕಂಡೊ

ಬಾಳೆ ಬುಡಲಿ ಇಣ್ಕಿದ ಕುಪ್ಪಿ
ಬತ್ತ ಸರಾಯದ ಕಳ್ಳುಪ್ಪಿ
ಕುಡ್ದೇ ಕುಡ್ದೊ ಗಣ್ಮಕ ಕುಪ್ಪಿ – ಕುಪ್ಪಿ
ಬೆಣ್ಣೆ ಕಂಡ್ಬು, ಕೋಳಿಗೈಪು
ಲಗಾಯ್ಸಿದ ನೆಂಪು
ಮನೆ ಮುಟ್ಟ್‌ಕಾಕನಾಗಿತ್ತ್
ಅವ್ಕೆ ಜೊಂಪೇ ಜೊಂಪು...

# ಹನ್ನೆರ್ಡ್ ತಿಂಗ

ಸುಗ್ಗಿನ ಉಗಾದಿ, ಹಬ್ಬ ಮೊದ್ವೆ
ಪೊಗ್ಗುನ ಬಿಸು, ಊರ್ ಹಬ್ಬಗ
ಬೇಸಲಿ ಗದ್ದೆ ಹದ ಮಾಡ್ವ ಕಾರ್ಬಾರ್
ಕಾರ್ತಿಂಗಲ್ಲಿ ಗದ್ದೆಗೆ ಬೀಜ ದೈವಕೆ ಕೊಡ್ದು
ಆಟಿಲಿ ಇಲ್ಲೆ ಶುಭಕಾರ್ಯ
ಸೋಣಲಿ ಗಣೇಶ ಕೈಲ್ ಮೂರ್ತ
ನಿರ್ನಾಲ್ ಹಬ್ಬ ಪೂಜೆ, ನಾಡ ದಸರ
ಬೆಣ್ತಿಂಗ, ಹಬ್ಬದೀವುಳಿಗೆ ಕಾವೇರಿ ಜಾತ್ರೆ
ಜಾಳ್ತೆಲಿ ಹುತ್ರಿ, ಸಳಿನ ಸಮಯ
ಪೆರಾರ್ದೆಲಿ ಉಟ್ಟು ಭತ್ತ, ಕಾಪಿ ಕೊಯ್ಲೊಟ್ಟಿಗೆ ಸಂಕ್ರಮಣ
ಪೊನ್ನಿಲಿ ಕೆಡಾಸ, ಒಕ್ಲು ಕೆಲ್ಸ
ಮಾಯಿಲಿ ಬರ್ವ ಮೊದ್ವೆಜಂಬರ, ಶಿವರಾತ್ರೆ
ಬಂಗಲಿ ಕಳ್ದದೆ ರೈತಂಗೆ ಹಂಗೆ
ಹನ್ನೆರ್ಡ್ ತಿಂಗಳ ಈ ಸಮಯ.

ದಂಡ್‌ನ ಕುರ್ತ್

# ಅರ್ಜುನ ಟ್ಯಾಂಕ್

ಭಾರತ ಸೇನೆನ ಗುಡು ಗುಡು ಟ್ಯಾಂಕ್
ಸಾಗಿಟು ಹತ್ತಿಲ್ದ್ ಗುಡ್ಡ, ಕಾಡ್ ಮೇಡ್
ಹಳ್ಳ ಕೊಳ್ಳ ಡೊಂಕು ಕೊಂಕು
ತಾಂಗಂಗಿಲ್ಲೆ ಸೋಂಕು!!

ಶೌರ್ಯ ಸಾಹಸನ ಮೇರ್ ಪಡೆ
ಸೇರಿಟು ಇದ್ ಭಾರತ ಭೂಪಡೆ
ನೆಲ, ಜಲ, ಪೊಯ್ಯೆ ಕಡೆ
ಸಾಗಿಟು ಇದ್ ಶತ್ರು ಬೀಡ್ ಕಡೆ!!

ಇದ್ 55 ಎಂಎಂ ಫಿರಂಗಿ
ನೆತ್ತಿಲಿ ಹೊತ್ತುಟು ತಿರಂಗಿ
ಇದಿವನ ಧೈರ್ಯದ ಭಂಗಿ
ಸಿಡ್ಸಿ, ಹೊಡ್ಸಿ, ಜ್ವಾಲಾಗ್ನಿ ಜಂಗೀ!!

ಫಿರಂಗಿ ಗುಂಡುನ ಧಾಳಿ
ಶತ್ರುನ ಎದೆ ಸೀಳಿ
ತೋರ್ಸಿಟು ಇಂವನ ಚಾಳಿ
ಮುಂದೆ ಸಾಗಿ ಶತ್ರುನ ಮಾಡ್ತ್ ಹೋಳಿ !!

# ನಿಷ್ಠಾವಂತ ಯೋಧ

ಆಯುಧ ಹಿಡ್ದ ಯೋಧ ಇಂವ
ದೇಶ ಕಾಯ್ವ ಕೆಲ್ಸದಂವ ಇಂವ
ಫಲ ಬಯಸದ ಸೇವಕ ಇಂವ
ದೇಶ ಸೇವೆನೇ ಈಶಸೇವೆಂತೇಳ್ತ್ ಇಂವ!!

ಕಷ್ಟಪಟ್ಟ್ ಕಾಯ್ವ ಇಂವ
ಕರ್ಮನೇ ಇಹಪರಂತೇಳಂವ
ಭಾರತಾಂಬೆನ ವೀರ ಮಜ ಇಂವ
ಸಮಯ, ನಿಷ್ಠೆ, ಪರಿಪಾಲಕ ಇಂವ!!

ಬಗ್‌ಲ್‌ಲಿ ಕೋವಿನ ಹಿಡ್ದುಟು
ಎಡ–ಬಲ ದೃಷ್ಟಿ ಹಾಯ್ಸಿಟು
ಶತ್ರು ಪಾಳ್ಯ ಹುಡ್ಕಿ ಹೊರ್ಟುಟು
ಗುರಿ ಹೊತ್ತ್ ನಡ್ದುಟು!!

ಗುಂಡು ಸಿಡಿಯಕನ
ಬೆನ್ನ್ ತೋರ್ಸದೆ
ಎದೆ ಒಡ್ಡಿ ಮುಂದೆ ಸಾಗಿಟು
ನಮ್ಮ ಹೈದ – ವೀರ ಯೋಧ!!

# ಎದೆ ಒಡ್ಡಿ ನಿತ್ತುಟು ನಮ್ಮ ಹೈದ

ಮೈ ರೋಮ ನಿಮ್ರಿ ನಿತ್ತಿತ್
ದೃಷ್ಟಿ ಗುರಿ ನೆಟ್ಟಂಗಿತ್
ಕೋವಿನ ಮೊನೆ ನೆಟ್ಟಿತ್
ಶತ್ರುನ ಎದೆ ಸೀಳಿತ್ತ್ ॥

ಮೋಡ ಬಾನ ನೆಗಾಡ್ತಿತ್
ಮೋಡದೆತ್ತರದ ಇಬ್ನಿ ಹಾರ್ೖಸ್ತಿತ್
ನಗೆನ ಹೂಬನ ಕಂಗೊಳಿಸ್ತಿತ್
ಭರತ ಭೂಮಿ ಗರಿಕೆದ್ರಿತ್ತ್!!

ಬುದ್ಧಿ ಮತ್ತೆ ಎಲ್ಲಾ
ಧೀರ ಸೈನಿಕ ನಿನ್ನ ರಟ್ಟೆ ಬಲ
ದಿರ್ಸ್ ಧರ್ಸಿ ತೋರ್ಸಿತ್ತ್
ಬಲಾಬಲ!!

ಮೈ ಮನ್ಸ್‌ಲಿ ಹೊಕ್ಕಿತ್ತ್ ಬಲ
ಸ್ಪಂದಿಸಿತ್ ವೀರ ತುಮುಲ
ಅದಾತ್ ನಿಂಗೆ ಜಂಘಾಬಲ
ನಿಂಗಾತ್ ಅದ್ ವೀರ ತಾಂಬೂಲ...!!

ಕನ್ಸ್ ನನ್ಸಾಗಿ ಇಂದ್
ಗುಂಡು, ಮಿಂಚ್‌ನ ಮಳೆ
ಶತ್ರು ಸಂಹಾರದ ಎಳೆ
ಮಣ್ಣ್‌ಲಿ ಮಣ್ಣಾತ್ ಕಳೆ!!

# ಯೋಧನ ಕನವರಿಕೆ

ಹಿಮಗಿರಿನ ಸಾಲ್
ಹಸ್ರ್ ಹೊದಿಕೆನ ವನಸಿರಿ ಮೇಲ್
ಹಳ್ಳ ತೋಡುಗಳ ಜುಳು ಜುಳು ಜಾಲ್
ಕೀರ್ತಿ ಗಳ್ಸಿಕೆ ಒಂದೊಂದೇ ಮಜಲ್

ಕೊಳ್ಳಲಿ ಬಳ್ಕಿ ಸಾಗುವ
ಜಲಧಾರೆ ಸಿಂಗಾರಿ ಕಂಡಂಗೆ
ಮನೆಲಿರ್ವ ಮನದನ್ನೆ
ನೆಂಪಾಗಿ, ತೊಂಪಾಗಿ ಮನ್ಸ್

ನೇಸರನ ಕಿರಣಲಿ ಕಂಡೆ
ನನ್ನವಳ ಮೈ ಕಾಂತಿ
ಹರಿವ ನೀರ್ಲೂ ಇಣ್ಕಿತ್
ನನ್ನವಳ ಪ್ರತಿಬಿಂಬ

ಹೂ ಬೊಳ್ಳಿ ಚಿಗ್ರ್ ಹಣ್ಣ್
ಮಾಗಿ ಬಗೆ ಬಗೆ ಜೊಂಪೆ
ಸಾರಿ ಹೇಳ್ತುಟು ಮನ್ಸ್‌ನ ಭಾಷ್ಯ
ನಿರ್ಮಲ ಮನ್ಸುಲೂ ಇಣ್ಕಿದೆ ನೆಂಪುನ ದಾರ್ಷ್ಯ

# ದಂಡ್‌ನ ಗಂಡಂಗೆ ಸ್ವಾಗತ

ಬಂದೇ ಬಂದದೆ
ನನ್ನಂವ – ಈ ಹಬ್ಬಕೆ
ತಂದೇ ತಂದದೆ
ನನ್ನಂವ – ಪ್ರೀತಿನ ಕಾಣಿಕೆ

ಹುಣ್ಣಿಮೆ ಚಂದ್ರಮನ
ಕಿರಣ –
ನನ್ನಂವನ ತೋಳ
ತೋರಣ

ಬಿಗ್ದಪ್ಪಿ ಸೆಳಿವ ಅಂವ್ಸರ
ಸಿಂಹಿ ಮುತ್ತು ಕೊಡ್ವ ಕಾತರ
ಸಂಪಿಗೆ ಕಂಪು ಸೂಸ್‌ತುಟ್ಟು
ಮಲ್ಲಿಗೆ ಪೊರ್ಮ್ಳ ಘಮಿಸ್ತುಟ್ಟು

ಇಂದ್ ನಾಳೆ ಹಬ್ಬ
ದೇವ್ರ ದೀಪ ಹೋಸಿ ಕೈಮುಗ್ದ್
ಬೇಡಿಕಣ್ತ್ ಒಂಟಿ ಹೆಣ್ಣ್
ಬಾನಾಡಿ ಮೀದ್ ಬಾ ನನ್ನ ರಾಜ...!!

# ದೇಶದ ಗಡಿ

ಗಡಿಲಿ ಎಳ್ದ ಮುಳ್ಳು ಬೇಲಿ
ಆಗುಟು ಇಲ್ಲಿ ಶತ್ರುಬಲಿ
ದೇಶಕಾಗುಟು ಇಲ್ಲಿ
ಸೂತಕದ ಮೈಲಿ

ಜಂಬರ ಆಡಂಬರ ಇಲ್ಲಿಲ್ಲೆ
ವಿಷಾನಿಲ ಜ್ವಾಲೆ ಎಲ್ಲೆಲ್ಲಾ
ಘಟಸರ್ಪ – ಕಾರ್ಕೋಟಕ ಇಲ್ಲೆಲ್ಲಾ
ಉಸ್ರು ಕಟ್ಟುವ ನೆಲೆ ಬಳ್ಸಿದಲ್ಲೆಲ್ಲಾ

ಹದ್ದ್‌ನ ಕಣ್ಣ್‌ಗಳ ಪಾರ
ಬತ್ತಿ ಹೋಗುಟು ನೀರ್
ಕಣ್ಣ್ ಗುಡ್ಡೆಗಳ ಬೇರ್
ತಿಂಬಕೆ, ಉಡಿಕೆ, ಇಲ್ಲಿಲ್ಲೆ ಮೇರ್

ಕೆಕ್ಕರ್ಸಿ ನೋಡಿಕೆ ದುರ್ಬೀನ್
ಕೋವಿ ಹಿಡ್ಕಂಡ್, ಫಿರಂಗಿ ಇಸಿಕಂಡ್
ಪಾರ ಕಾದದೇ ಕಾದದ್
ನಮ್ಮ ದೇಶದ 'ಗಡಿ'ನ !!

# ಪೊಯ್ಯೆ ಲೋಕಲಿ ನಮ್ಮ ವೀರ ಹೈದ

ಹೆಸ್ರ್ – ಪೊಯ್ಯೆ ಭೂಮಿ, ಲೋಕ
ಹತ್ರ ಹೋಕನ ಮತ್ತೆ ಮುಂದೆ ಹೋವ
ಮರೀಚಿಕೆನ ಮಾಂಯಲೋಕ
ಮೈಲ್‌ಗೊಮ್ಮೆ ಕುಣ್ದುಟು

ಪೊಯ್ಯೆರಾಜ, ಒಂಟೆ ಸವಾರಿ
ಗಡಿಮುಟ್ಟ ಸಾಗಿಟು
ಉಷ್ಟ್ರಹಕ್ಕಿ ಸಾಲ್‌ಲಿ
ಈ ನಮ್ಮ ಧೀರ ಯೋಧ ಹೈದ

ಭಾರತಾಂಬೆ ಹೊದ್ದುಟು
ಪೊಯ್ಯೆನ ಮುಸ್ಕ್
ಬಿರ್ ಬಿಸ್ಲ್ ಧಗೆ, ತಂದುಟು
ಒಣ ಗ್ರೀಷ್ಮ ಸಹಿಸಿಟು

ನಡ್ದುಟು ಸೈನಿಕ
ಮಣಭಾರ ಹೊತ್ತ್
ಗುರಿ ಒಂದೇ ಗುರಿ ಒಂದೆ
ಗಡಿ ಕಾಯೊದೊಂದೇ...!!

# ಜಾತಿ ಒಂದೆ ಮನ್ಸ ಜಾತಿ ಇಲ್ಲಿ

ಜಾತಿ, ಭೇದ, ಜನಾಂಗ ಇಲ್ಲಿಲ್ಲೆ –
ಭಾರತಾಂಬೆನ ಮಕ್ಕ ನಾವು
ಸಿಸ್ತ್‌ನ ಸಿಪಾಯಿಗ
ಒಂದೇ ಅವ್ವ, ಒಂದೇ ದೇಶ, ಒಂದೇ ಬಾಸೆ

ಮಂದಿರ, ಮಸೀದಿ, ಗುರುದ್ವಾರ, ಚರ್ಚ್
ಎಲ್ಲೊವು, ಎಲ್ಲ್ಯಾರ್, ಎಲ್ಲೊವ್ಕೆ ಸ್ಮರಣೆ ಮಾಡ್‌ಕ್
ದೇಶಕಾಗಿ ಪರಮಾತ್ಮನ ನೆನ್ಸಕ್

ಮೇಲ್, ಕೀಳ್‌ಗಿಲ್ಲೆ ಇಲ್ಲಿ ಜಾಗೆ
ಮನ್ಸ್, ಮೊನ್ಸಂತೇಳ್ವ ಒಂದೇ ಬಗೆ

ಒಂದೇ ಮೊಂದ್ರಿ, ಒಂದೇ ಊಟ
ಬದ್ಕಿಕೆ ಒಂದೇ ಗಲಾಸ್‌ನ ನೀರ್
ಗಡಿಯುದ್ದಕೆ ಒಂದೇ ದಾರಿ

ಶರೀರ ಸೀಳಿರೆ ಕಾಂಬೊದು
ಒಂದೆ, ಮೂಳೆ ಮಾಸದ ಕೊಮ್ಮೆ
ಕೊದಿವ ಕೆಂಪು ನೆತ್ತರ್‌ನ ಬಾಸೆ
ಸತ್ಯ, ನಿಷ್ಠೆ, ಕರ್ಮ, ಧರ್ಮ
ದೇಶ ಇದೊಂದೇ ಸರ್ವಧರ್ಮ ಮಿಳಿತ

# ಸುಗ್ಗಿನ ಹಿಗ್ಗ್

ಸುಗ್ಗಿ ಬಂದುಟು
ಹಬ್ಬ ಬಂದುಟು
ಉಗಾದಿ...

ಭತ್ತ ಕಾಪಿ ಮೆಣ್ಸ್ ಕೊಯ್ಲ್
ಮೊದ್ವೆ ಜಾತ್ರೆ ಬಂದುಟು
ಗಂಡ್‌ಗೊಂದು ಹೆಣ್ಣ್
ಹೆಣ್ಣ್‌ಗೊಂದು ಗಂಡ್
ಹುಡ್ಕ್‌ತೊಳೊ ಗೋತ್ರದವು
ಕುರುಡು ಕಾಂಚಾಣ ಓಡಾಡ್ದೆ
ಬಿಟ್ಟಿ ಬಿದ್ವರ ಕೈಲಿ
ಸೀರೆ ರವ್ಕೆ ಚೂಡಿ
ಸೂಟು – ಬೂಟು ಸುರಾಲ್
ತೆಗಿಯೊಕೆಲ್ಲವುಕೆ,
ಕೊಮ್ಮೆ – ಕಡಿಕೆಲಿ ಹುಗ್ಗೆಕಾಳ್
ಎಲಿ ಹೆಗ್ಗಣಕೂ
ಹಬ್ಬ ಬಂದುಟು
ಸುಗ್ಗಿ ಬಂದುಟು
ಹಿಗ್ಗ್ ತಂದುಟು
ಹುಗ್ಗೆ ಮನೆಲಿ ತುಂಬಿಟು

# ಅಂದ್ – ಇಂದ್

ಕಾಲ ಒಂದಿತ್ತ್
ಕೂಡು ಕುಟುಂಬದ
ಪಟ್ಟೆದಾರಿಕೆ ಸಾಗಿತ್

ಇಂದ್ –
ಇಕ್ಕಟ್‌ನ ಸಂವ್ಸಾರ
ಎಲ್ಲೊವು ಪಿಳ್ಳೆ ಸೇರಿಪಟ್ಟೆದಾರ್

ಹಿರಿಯೊವು ಇಲ್ಲಿ ಗುಡ್ಸಿ ಬಿಸಾಕಿದ
ಮಾಯ್ಪುನಂಗೆ ಮೂಲೆಲಿ

ಅಂದ್ –
ಚಾಂಪ – ಚಾಮೆವ
ಉಗ್ಗಪ – ಉಗ್ಗವ
ಬೋಜಪ – ಬೋಜವ

ಇಂದ್
ಗ್ರಾಂಡ್‌ಪಾ, ಗ್ರಾಂಡ್‌ಮಾ
ಆಂಟಿ – ಅಂಕಲ್
ಡ್ಯಾಡ್ – ಮೋಮ್

ಅಂದ್,
ಮಕ್ಕಳಾಡ್ಸಿಕೆ ಅಜ್ಜಿ ಸಾಕಿತ್
ತುತ್ತನ್ನದಗ್ಗ್ಯೆ ಅಷ್ಟೆ ಬೇಕಿತ್
ಮನ್ಗಿ ನಿಲ್ಗಿಕೆ ಮೊಂದ್ರಿ ಸಾಕಿತ್

ಇಂದ್
ಆರ್ ತಿಂಗಕೆ ಬೇಬಿ ಸಿಟಿಂಗ್
ಬ್ರೆಡ್ – ಬಟರ್ – ಜಾಮ್
ನಿಲ್ಗಿಕೆ ಡನ್‌ಲಪ್ ಡಿಜೆಸಾಂಗ್

# ನಮ್ಮ ಹೊತ್ತೊವ್ಳು

ಇಡೀ ಭೂಲೋಕನ ಹೊರ್ವ
ಭೂಮಿ ತಾಯಿ ನೀನ್
ನೀರ್, ಬೇರ್, ಮರ ಮುಟ್ಟು
ಪಾಪ – ಪುಣ್ಯ ನಿಜ – ಸುಳ್ಳು
ಎಲ್ಲಾ ಕರ್ಮ ಅಂಡ್ಗಿಟು
ನಿನ್ನ ಮಕ್ಕಳೊಳಿಗೆ
ನೀರ್ಲಿ ತೇಲ್ವ ಭೂಮಿತಾಯಿ
ಬಾನ – ಸಾಗರಕೆ
ನೆಂಟ್ತಿ ನೀನ್ ಶ್ರೇಷ್ಠ

ನಿನ್ನ ಹೊಟ್ಟೆ ಬಗಿಯಕೆ
ಬಂದವರ ಬುಡ್ಬಡ ಸುಮ್ಮನೆ
ವಳ್ಳವುಕೆ ವಳ್ಳದ್ ಮಾಡ್
ಕೆಟ್ಟವರ ನಿರ್ಮೂಲ ಮಾಡ್
ನಿನ್ನ ಸುತ್ತ ತಂಗಾಳಿ ಬೀಸಿ
ತೊಂಪು ಮಾಡ್ ದುಷ್ಟರ್ನ
ನಿನ್ನ ನೆತ್ತಿ ತಂಪಾಕೆ ಬೇಕ್
ವರುಣನ ಶ್ರೀ ರಕ್ಷೆ
ನಾವೆಲ್ಲಾ ಬೇಡ್ವೆ ನಿನ್ನ ರಕ್ಷೆ

# ಅರೆಬಾಸೆ ಐಸಿರಿ

ಅರೆಬಾಸೆ ಸಾಹಿತ್ಯ ಸಿರಿ
ಇದ್ ನಮ್ಮ ನುಡಿಸಿರಿ
ಇದಾಕು ನಮ್ಮ ಐಸಿರಿ
ಕಣ್ತುಂಬ ಕನ್ಸುಟ್ಟು
ನಮ್ಮ ಬಾಸೆ ನಡ್ದುಟು
ದೇಶ ವಿದೇಶಕೆ ಹೋಕುಟ್ಟು
ನಮ್ಮ ಮನೆ ಹೆಸ್ರ್ ಗೋತ್ರ
ನಿಮ್ಮ ಮನೆ ಹೆಸ್ರ್ ಗೋತ್ರ
ನೆಂಟಸ್ತಿಕೆನ ಗಂಟ್‌ನ ಸ್ತೋತ್ರ

ಅರೆಬಾಸೆ ಸಿಂಯಿ ಜೇನ್‌ನಂಗೆ
ಬಂಗಾರ ನುಡಿ ನುಡ್ದಂಗೆ
ಗಂಗೆ – ಕಾವೇರಿ ಹರ್ದಂಗೆ
ನೀವು ಎಲ್ಲೇ ಇರಿ ಹೆಂಗೇ ಇರಿ
ಆದರೆ ಅರೆಬಾಸೆ ಮರಿಯದಿರಿ
ವಿದೇಶಿ – ನೀವೂ ಕಲಿಯನಿ
ಬುಡಿಕಾಗದ್, ನಮ್ಮ ಸಂಸ್ಕೃತಿ
ಬಾಸೆ, ಉಡ್ಪು – ಮುಡ್ಪುನ
ವೆಂಕಟರಮಣನ ಶ್ರೀರಕ್ಷೆ
ಸದಾ ಇರ್ಲಿ ನಮ್ಮೊಕ್ಕೆ.

# ನೆಲದ ಬೆಲೆ

ಇರ್ವ ಒಂದು ನೆಲೆನ ನೆಲ
ಇದನ ಮಾಳಿ ಮಾಡಿ ಬಿಲ
ಸಿಕ್ಕುಲೆ ಅವ್ಕೆ ಜಲ
ಇದ್ ವಿಷದ ಸೆಲೆನ ಜಾಲ
ಇದ್ ನನ್ನ ನೆಲ
ಏನುಟ್ಟು ಇದ್ಕೆ ಬಲ
ಹೊಡ್ದಾಡಿ ಸಾಯಕನ
ನೋಡ್ವೆ ಎಲ್ಲಾ
ಎಡ–ಬಲ
ಅಂವನ ಹಾಕಿಕೆ ಸಾಕ್
ಆರ್ ಮೂರರ ಬಿಲ
ನೆಲಕಾಗಿ ಗುಂಡುನ ಮೊರ್ತ
ಶತ್ರು – ಶತ್ರುಗಳ ಸೆಳ್ತ
ದೇಶಲಿ ಎಳ್ತ
ಆದೆ ಇಲ್ಲಿ ಅನಾಹುತ
ಆಚೆ – ಆ ಸ್ಥಾನ
ಪಾಕಿಸ್ಥಾನ
ಪಾಪಿಗಳ ಆವಾಸ್ಥಾನ
ಗಡಿಮುಟ್ಟ
ಉಗ್ರಸ್ಥಾನ.

# ಶಾಲೆ (ಗುರು)

ಜ್ಞಾನ ಜ್ಯೋತಿ ಬೆಳ್ಗುವ ದೇಗುಲ
ಗುರು ದೇವರ ಆಲಯ
ಬದ್ಕ್ ಕೊಡ್ವ ಕಮ್ಮಟ –
ಜ್ಞಾನ ಭಂಡಾರದ ಗಣಿ
ಮೊಂಡ, ಗುಂಡ, ಪಿಂಡ
ಅದನ ಹೊಡ್ದ್ – ಬೊಡ್ದ್
ತಿದ್ದಿ – ತೀಡಿ ಹದ ಮಾಡ್ವ
ಕುಲುಮೆ – ಕಮ್ಮಾರ
ಕೈ ಮುಗ್ದ್ ಒಳಗೆ ಬಾ
ಇದ್ ಸರಸ್ವತಿನ ನೆಲೆ

# ಕಳ್ಳ್‌ನ ಮಹಿಮೆ

ಕಳ್ಳ್! ನಾನ್ ಹುಟ್ಟ್‌ಕಾಕನೇ ಗೊತ್ತು
ನನ್ನ ಹೆತ್ತಯ್ಯೆ ಕುಡೀತಿತ್
ನಾ ಬೆಳ್ದ ಜಾಗ ಒಣ್ಗಿಕೆ
ಅಯ್ಯೆನ ಶರೀರಲಿ ಸೇರ್ದ
ಆಲ್ಕೊಹಾಲೇ ನಂಗೆ ಹಾಲಾಗಿತ್
ಬಾಲ್ಯ ಕಳ್ದ್ ಮೂಕಡಿಲಿ
ಮೊಳ್ದ ಮೀಸೆ ರೋಮಗ
ಅದರೊಟ್ಟಿಗೆ ಅಂಟಿತ್
ರಂ, ಬ್ರಾಂದಿ, ವ್ಹಿಸ್ಕಿನ ನಂಟ್
ಮೊದ್ವೆ ಆದ ಸುರು ಆಣೆ ಪ್ರಮಾಣ
ಕಳ್ಳ್‌ನ ಮುಟ್ಟಿಕಿಲೆ, ನೋಡಿಕಿಲೆ
ಗಂಡ – ಹೆಣ್‌ನ ಸಿಂಯಿ ಸಂವ್ಸಾರ
ಕಳ್ತ್ ಮೂರ್ನಾಕ್ ವೊರ್ಸ ಸರಸರ
ಸುರಾತ್ ಸಂವ್ಸಾರದ ಹೊಣೆ
ತಲೆಗೆ ಹೊಕ್ಕಿತ್ ಹಾಳ್ ಹುಳ
ಕಳ್ಳೇ ನನ್ನ ದೇವ್ರುತಾ ಹೇಳ್ತ್
ಮತ್ತೆ ಕುಡ್ತ್, ಕುಡ್ದ್ ಕಾಯಿಲೆ ಬೀತ್
ಬಂದೇ ಬಾತೊಂದು ದಿನ
ಕಾಯಿಲೆಲಿ ಬಿದ್ದ್ ಹೊಣ್ಕ್ಯಾಡಿ
ಕಳ್ಳ್‌ಂತೇಳ್ವ ವಿಷ ನೆತ್ತಿಗೇರಿತ್
ಅಂತ್ಯದ ದಿನ ಬಂದೇ ಬಾತ್
ಆಗನೂ ಇಸಿದೊ ನನ್ನಾತ್ಮಕೆ ಕಳ್ಳ್ !!

# ನನ್ನ ನೆಲದ ರಕ್ಷಣೆ

ಹೆಣ್ಣ್ – ಮಕ್ಕ – ಸಂಪ್ಸಾರಂದ
ದೂರ ನಿನ್ನ ತೀರ
ಕೋಟಿಗಟ್ಟೆ ಅವ್ವ – ಮಕ್ಕಳ
ಕಾಯಕೆ ನಿತ್ತ ಧೀರ ನೀನ್
ಕಾರಿರ್ಲ್, ಜಡಿಗೂಟಿಮಳೆ
ದಟ್ಟ ಕಾಡ್, ಪೊಯ್ಯೆ ರಾಶಿ
ನೀ ಮುಂದೆ ಸಾಗಿ
ಒಳಿ ಕುದ್ದ ಗಡಿಲಿ
ನುಗ್ಗಿ ಬಂದ ವೈರಿಗಳ
ರುಂಡ – ಮುಂಡ – ಚೆಂಡಾಡಿ
ದೇಶ ಕಾಯ್ವ ನಮ್ಮ
ಹೈದಾ...
ನಿಂಗೆ ನಮ್ಮ ಅರೆಬಾಸೆ
ಜನಾಂಗದ ಶೌರ್ಯ ಸಲ್ಯೂಟ್.

# ನನ್ನ ಅರ್ಜಿ

ಆಫೀಸಿಗೆ ಕೊಟ್ಟ ನನ್ನ ಅರ್ಜಿ
ಮೂಕು ಮುರಿವ ಮೂಗರ್ಜಿ
ಪಿವುನನ ಮರ್ಜಿ
ಮುಂದೆ ಕಳ್ಸಿಕೆ ಅಂವಂಗೆ ಅಲರ್ಜಿ!!

ಅತ್ತ ನರ್ಕನೂ ಸಿಕಿತ್ಲೆ
ಇತ್ತ ಸೊರ್ಗನೂ ಸಿಕಿತ್ಲೆ
ಫೈಲ್‌ನ ಕಳ್ಸಿಕೆ ಪುರ್ಸೊತಿಲ್ಲೆ
ಪಿವುನುನ ಕೈ ಬಿಸಿಮಾಡ್‌ತ್ಲೆ

ಕೂಡ್ಸಿ, ಕಳ್ದ್ ಗುಣ್ಸಿ, ಭಾಗ್ಸಿ
ಪಿವುನು ಒಂದು ರಕಂ ಹೇಳ್ತ್
ರಕಂ ಕೊಟ್ಟಾಕನ, ಅಡೀಲಿ
ಅಂಣ್ಗಿ ಕುದ್ದ ಫೈಲ್ ಇಣ್ಕಿನೋಡ್ತ್.

ನನ್ನ ನೋಡಿ ಫೈಲ್ ಕೆಣ್ಕ್‌ತಿತ್
ನೀನೆಂತಾ ಆಸೆ ಬುರ್ಕ
ಬಿಸಾಕ್ ಎರ್ಡ್ ಕಟ್ಟ್
ನಾನ್ ಮುಂದೆ ಹೋಕುಂತೇಳ್ರೆ...

ಅಂತವ್ಕೆ –
ಸುಳ್ಳೆದೇವ್ರು – ಲಂಚನೇ ಪ್ರಸಾದ!!

# ಆಣಿ

ಯಾಕೂ ಬ್ಯಾಡದ ಒಂದು ಆಣಿ!
ಆ ಒಂದು ಆಣಿ ಹಾಳಾದರೆ
ಆ ಭಾಗನೇ ಹಾಳ್
ಆ ಭಾಗ ಹಾಳಾದರೆ
ಒಂದು ಯಂತ್ರನೇ ಹಾಳ್
ಆ ಯಂತ್ರ ಹಾಳಾದರೆ
ಒಂದು ಯುದ್ಧನೇ ಸೋತಂಗೆ
ಒಂದು ಯುದ್ಧ ಸೋತರೆ
ನಾವು ಸತ್ತಂಗೆ
ಯಾವುದಕ್ಕೂ ಒಂದು ಆಣಿ
ಹಾಳಾಗದಂತೆ ನಾವ್ ನೋಡಿಕಣಕು

## ಚೌಕಾಸಿ

ತರ್ಕಾರಿಗೆ ಮಾಡುವೆ ಜನ
ಚೌಕಾಸಿ...!
ತಕರಾರಿಲ್ಲದೆ ತಕಂಡವೆ
ಬಾಟ್ಲಿ ವ್ಹಿಸ್ಕಿ!!

## ಪಿಟಾಕಿ

ಹುತ್ರಿ, ದೀವುಳಿಗೆಗೆ
ಸೀಮಿತ
ಸಿಡಿಗುಂಡು
ಪಿಟಾಕಿ!
ಆದರೆ...
ಯಾಗೊಳು, ಬೆಳ್ಗೆ, ಹಿಂಬೊತು, ಇರ್ಲ್
ಸಿಡ್ಸಿದೆ ನನವ್ಹು
ಮಾಲೆ ಪಿಟಾಕಿ

## ಹನಿಗವನ

ಹನಿಗವನದ ಅರ್ಥ –
ಕ್ಷಣ ಮಾತ್ರಲಿ
ಉದ್ದ ಕವಿತೆನ ಸಾಲ್‌ಗಳ
ಹನಿ ಹನಿ ಹರ್ದ್!
ಹದ ಮಾಡ್ದ
ಹನಿ ಹನಿ ಪದಗ!!

## ಭಾಸ್ಕರ (ಸೂರ್ಯ)

ಬಾನ ಕರೆಲಿ ಬಗ್ಗಿ
ಕರಿಗೂಡು ಕತ್ತಲೆನ ಬಗ್ದ್
ಜಗನ ಜಾರ್ಸಿ
ಭೂಮಿಗೆ ನೆಂಟ್ರಾಗಿ ಬಂದ್
ಜೀವಜಂತುಗಳಿಗೆ
ನವ ಚೇತನ
ನೀಡ್ವ
ಪರಮಾತ್ಮ!!

## ನೆಂಪು

ಮನ್ಸ್ ಪುಟ್ಟ
ಕೂಸುನಂಗೆ
ಹೃದಯಲಿ ಸಾವ್ರ
ನೆಂಪುನಂಗೆ
ಹಸ್ರ್ ಇರ್ಲಿ
ಉಸ್ರು ಇರ್ಲಿ
ಒಟ್ಟಿಗಿರ್ಲಿ
ನಮ್ಮ ಬಾಳ್‌ಲಿ

## ಒಲವು ಮೂಡೊಕು

ನೇಗ್ಲ್ ಗದ್ದೆ ಹೂಡ್ದಂಗೆ
ಮನೆಗೆ ಬಾಗ್ಲ್ ಇದ್ದಂಗೆ
ಮಣ್ಣಿಗೆ ಗೊಬ್ಬರ ಕೊಟ್ಟಂಗೆ
ನಮ್ಮ ಬಾಳ್‌ಲಿ ಒಲವು ಮೂಡೊಕು.

# ಮೂರ್ನೆ ಮೊಕ

ರಂಭೆ, ಊರ್ವಸಿ, ಮೇನಕೆಗ
ಅಂದ್ ಮಾಡ್ದೊ 'ಸಾಧು'ಗಳ
ತಪೋಬಂಗ
ಸಾಧುಗಳ ಮೊಕ ಹೊತ್ತೊವು
ಮಾಡ್ದೊ ಇಂದ್
'ಹೆಣ್ಮಕ'ಳ ಮಾನಭಂಗ!!

# ಕುಡ್ಕನ ವ್ಯಸನ

ಕುಡ್ಕನ ಮನೆ ಮಡ್ಕೆ
ಕಾಲಿ ಆದರೇನ್?
ಮನೆ, ಹೆಂಡ್ರ್ ಮಕ್ಕ
ಹಾದಿಗೆ ಬಿದ್ದರೇನ್?
ಕುಡ್ಕನ ಚಿಂತೆ ಒಂದೇ...
ಇಂದ್'ನ ಗುಟ್ಕುಗೇನ್
ಮಾಡ್ದುಂತಾ...!!

## ಇದ್ದದ್ ಇದ್ದಂಗೆ

ಮೊದ್ವೆ ಆದ ಒಂದೆರ್ಡ್ ವೊರ್ಷ
ಸರಸದ ಹರ್ಷ
ವೊರ್ಸ ಉರ್ಳಿದಂಗೆ
ಗಂಡ–ಹೆಣ್ನ
ನೀರಸ–ವಿರಸ
ಇದ್ ಜೀವ್ನದ
ರಸ–ವಿಷ

## ಹಣೆಬರ

ಕವಿತೆ ಬರ್ಯಕೆ ಬೇಕು
ಒಳ್ಳೇ ಬರಹ!
ಕವನ ಅಚ್ಚ್ ಆಕೆನೂ ಬೇಕು
ಹಣೆಬರ !!

## ರಾಜಕೀಯ ಕಳೆ (ಕಚ್ಚಡ)

ರಾಜಕಾರಣಲಿ
ರಾಕ್ಷಸಾಕಾರ ಬೆಳ್ದ ಕಳೆನ
ಕೀಳಿಕೆ ದಾನವ ಕುಲನೇ
ಹುಟ್ಟಿ ಬರೊಕು!!

## ಸೊನ್ನೆ

ಸೊನ್ನೆ ಸೊನ್ನೆಂತ
ಕಮ್ಮಿ ಮಾಡ್ಬಡಿ ನನ್ನ
ನಾನಿಲ್ಲರೆ –
ಮುಂದೆ ಹೋಕಿಲೆ
ನಿಮ್ಮ ಎಣ್ಕೆನ
ಲೆಕ್ಕ...!!

## ಹುತ್ರಿ ನೆರೆ

ಹಲ್ಸ ನೆಲೆ, ಕುಂಬ್ಳಿ, ಅರ್ಳಿ (ಆಲ)
ಗೋಳಿ, ಗೇರ್ ಇಲ್ಲಿರೆ ಮಾಯಿನೆಲೆ
ಐದೆಲೆ – ಅಚ್ಚಿನಾರ್ – ಕದ್ರ್
ಇದ್ ಹುತ್ರಿ ನೆರೆ –

ನೆಲ್ಲಕ್ಕಿ ಅಡಿಲಿ
ಮುಕ್ಕಾಲ್ ಮಣೆಲಿ
ಬೆಳ್ಗ್‌ತುಟು
ನಂದಾದೀವಿಗೆ
ದೇವರ ಪಟಲಿ

## ಮಂತ್ರಿಗಿರಿ

ಕುರ್ಚಿಲಿ
ಕುದ್ದದ್ ನೋಡಿ
ಮತದಾರ
ಗಡಗಡ
ಕುರ್ಚಿ
ಉರ್ಳ್ ಕಾಕನ
ಪಕ್ಷಕಾತ್
ಅವಘಡ

## ಕನ್ನಡ್ ಜಿಲ್ಲೆ

ಗಡಿ ಸಂಪಾಜೆಲಿ
ಕೈಬೀಸಿ ಕರೀತುಟು
ಕಾಯಿ, ಕಮ್ಮ್‌ನ
ಹೊಂಬಾಳೆ ಜೊಂಪೆ
ತೆಂಕ್‌ಲಿ ತೊಯ್ದಾಡ್ತುಟು
ಕಮ್ಮ್‌ನ ಜೊಂಪೆ ಕಟ್ಟಿಟು
ಬೀಜದ ಕಾಯಿ ನೇಲ್ತುಟು
ಸಿಂಗಾರಿ ಕೆಮಿಲಿ ಜುಮ್ಕಿ
ನೇಲ್ದಂಗೆ ನೇಲಿಟು

## ಕೊಡ್‌ಗ್

ಹಸ್ರ್ ಸೀರೆ ಉಟ್ಟ್
ಪಡುವಣ ಘಟ್ಟಲಿ
ಹಸ್ರ್ ಕಂಬ್ಳಿ ಹೊದ್ದ್
ಮಲ್ಗಿಯೊಳೆ ತನ್ನಷ್ಟಕೆ!
ಕಾಪಿ, ಮೆಣ್ಸ್, ಯಾಲ
ಜೀವ್ನಕೆ ಬೇಕು ದುಡ್ಡುನ ಬಲ
ಇದ್ ಗಿರಿ, ಝುರಿನ ಜಾಲ
ದುಷ್ಟ ಶಕ್ತಿಗಳೇ ಎಳಿಬಿಡಿ
ನನ್ನ ಬಾಲ!!

## ಕನ್ನೆ ಕಣ್ಣ್

ಅದೊಂದ್ ದಿನ
ಎದ್ರ್ ಕಿಡ್ಕಿಲಿ ಕಂಡ
ನಿನ್ನ ಕನ್ನೆ ಕಣ್ಣ್
ನನ್ನಾಸೆನ ನೋಡಿ
ನಾಚಿಕಂಡ್ ಇಣ್ಕಿತ್ತ್
ನಾನದನ ಒಂದು ಪಟ ಮಾಡ್ಕಂಡೆ
ಹೃದಯ ಗೂಡುಲಿ

## ವಯ್ಸಿಗೆ ಬಂದೊವ್ಕ

ಬೆಳ್ಗೆನ ಇಬ್ನಿ ಹನಿ
ಎಲೆಗಳ ಮೇಲೆ ಬಿದ್ದ್
ಸೂರ್ಯ ಬಾಕನ
ಮಿಂಚುವ, ಕಂಡ ಕಂಡವರ
ಕಣ್ಣ್ ಕುಕ್ಕುಸುವ
ಮಲ್ಲಿಗೆ ಹೂವು

# ಕವಿ

ಕವಿಗೆ ಇಲ್ಲೆ ಮೇಲ್ ಕೀಳ್
ಬಡವ–ಸಿರಿವಂತ
ಸಣ್ಣಂವ ದೊಡ್ಡಂವ
ಮೆದ್ಲ್ – ಸಿರಿವಂತ
ಬರವಣಿಗೆ – ಬಡವ
ಬರ್ದೇ ಬರಿಯೊಕು ಕವನ
ರಚನೆ ಮಾಡೊಕು ಕಾದಂಬರಿ
ಆಡಿ ತೋರ್‍ನೊಕು ನಾಟಕ
ಕಲ್ಪನೆಗೆ ಕಾಸ್‌ನ ಬೆಲೆ ಇಲ್ಲೆ
ನೋಡ್ವಂಗಿರೊಕು ನಾಟಕ
ಓದ್ವಂಗಿರೊಕು, ಕಾದಂಬರಿ
ಅರ್ಥೈಸಿಕಣಕು ಕವನ
ಬರ್ದನೆ ನಾನೊಂದು ಕವಿತೆ
ಹುಚ್ಚು ಕುದ್ರೆ ಕೊಣ್ದಂಗೆ
ಒಂದೊಂದು ಗೀಟ್‌ಲಿ
ಬರ್ದುಟು, ತುಂಬಿಟು
ನನ್ನ ಹೃದಯ ತುಂಬಿದ
ಭಾವನೆಗಳ ಸಂತೆ –

# ಆತ್ಮ

ಕೊಂಡಿ ಕಳ್ಚಿ ನೇಲುವ
ಮೂಳೆನ ಜೊಂಪೆ
ಹೊಲ್ಸ್ ಮಾಸ ಕರ್ಗಿ
ಅಚ್ಚ ಬೆಳಿವರ್ಣದ
ಶುದ್ಧ ಅಸ್ಥಿಗಳ ಮಿಂಚ್
ಭಗವಂತ, ತಿದ್ದಿ ತೀಡಿ
ಮಾಡ್ದ ಮೊಸ್ಸನ ಗೂಡು
ಅದರ್ಲ್ಲೊ ಉಟ್ಟು ಆತ್ಮ
ಗಹಗಹಿಸಿ ನೆಗಾಡ್ದೆ
ನೀ ಮಾಡ್ದ ತೊಪ್ಪುನ ಗ್ರಹಿಸಿ.

# ಹರ್ಸವೆ

ಈ ವೊರ್ಸ ನಮ್ಮಲ್ಲಿ 'ಹರ್ಸವೆ'
ಏಳ್ ದಿನ ಮುಂದೆ ಗೊನೆಕಡ್ದ್ ಇಸ್ಸುವೆ
ನೆಂಟ್ರ್ - ನಾಡ್‌ಗೆ ಹೇಳಿ ಕಳ್ಸುವೆ
ಭಕ್ತರೇಳ್ ದಾಸ - ದರ್ಶನಕಾರ ಬಂದವೆ

ಮನೆಗುಂಡ, ಹರ್ಕೆಗುಂಡ ಕಟ್ಟುವೆ
ಕೊಟ್ಟ ಗೂಡೆಗ ಎಣ್ಣೆಕಾಯಿ ತಂದವೆ
ಭಕ್ತಿಂದ ಸ್ವಾಮಿ ವೆಂಕಟೇಶನ ಬೇಡುವೆ
ಭಕ್ತ ನಿತ್ತೊವು ದಾಸನಾಜ್ಞೆ ಪಾಲ್ಸುವೆ

ನೆಂಟ್ರ್ - ನಾಡ್ರ್ ಬಂದೊಳೊ
ಹಣ್ಣ್ ಕಾಯಿ ಬೊಂಡ ಎಣ್ಣೆ ತಂದೊಳೊ
ಭಕ್ತರಾದೊವು ಎಣ್ಣೆಪೂಜಿ ನೀರ್ ಮೀದ್ ಬಂದೊಳೊ
ಗುಂಡ ಪೂಜೆ ಸೇವೆ ಮಾಡಿಕೆ ನಿತ್ತೊಳೊ.

ಹಣ್ಣ್ - ಕಾಯಿ ನೈವೇದ್ಯ ಪೂಜೆ ನಡ್ದುಟು
ಎಳ್ಳ್ ಬೆಲ್ಲ ಮೆಣ್ಸ್ ಪಾನ್ಕ ಮಡ್ಕೆ ತುಂಬಿಟು
ಮೈಮಾನಿಕೆ ಸ್ವಾಮಿಭಕ್ತ ಧ್ಯಾನ ಮಗ್ನ ಆಗಿಟು
ದರ್ಶನ ಬಂದ್ ಭಕ್ತರ್ಗೆ ನುಡಿ ನೆಮ್ಮದಿ ಕೊಟ್ಟುಟು
ಕೆಂಚ್ರಾಯ - ಕರಿರಾಯಂಗೆ ಆಡ್ ಬಲಿ ಕೊಡಿಕುಟು

ಹರ್ಕೆ ಹಣ 'ಮುಡ್ಪು'ಗೆ ಹಾಕಿ ಇಸ್ಸಿದೊ
ಶುದ್ಧ ಮುದ್ರಿಕೆ ಶಂಖ ಜಾಗಟೆ ಬಾರ್ಸಿದೊ
ಗೋವಿಂದಾರ್ಮಣ ಗೋವಿಂದಾ ಭುಜಿಸಿದೊ
ಅಟ್ಟಲಿ ಮುಡ್ಪುನ ಕಟ್ಟಿದೊ

# ಕಳ್ದ ಒಂದು ವೊರ್ಸ

ಯಾವ ಗ್ರಹಣದ ಗ್ರಾಚಾರನೊ
ಯಾವ ಜಲ್ಮದ ಪಾಪನೊ
ಯಾರ್ ಕೊಟ್ಟ ಶಾಪನೊ
ಯಾರ್ ಮಾಡ್ದ ಬಾಕಿನೊ
ಕಳ್ದ ವೊರ್ಸದ ಒಂದಿನಾ...

ಅದೆಂತದೊ 'ಸೋಂಕು'ನ ಗಾಳಿ
ಬರಬರ ಬಂದ್ ಬೊಡ್ತ್
ನೆರೆ–ಕರೆ, ನೆಂಟ್ರ್ – ನಾಡ್ಗ ದೂರಾಗಿ
ಇರ್ಲ್, ಹಗ್ಲ್ ಒಂದಾತ್
ಕಾಣದಾತ್ ತರತರದ ಕೆಂಪು ಬಸ್ಸ್‌ಗ

ಹಬ್ಬ ಜಾತ್ರೆ ಮೊದ್ವೆ ಜಂಬರ
ಏನೇನೂ ಇತ್ಲೆ ಆಡಂಬರ
ದಿನ ಮೂರೊತ್ತು ಬಾಯಿಗೆ ಬಿದ್ದ ಬಟ್ಟೆ ಬೀಗ
ಬೀಗ ತೆಗ್ದರೆ ಉಷಾರ್ !!
ಆಗಿತ್ತ್ ಕೋವಿಡಾಸುರನ ಕಟ್ಟಪ್ಪಣೆ.

ಪಾಪ! ತೊಂಡೆತುಟಿಗೆ ಮೆತ್ತಿದ ಕೆಂಪು
ಕಾಣದಾತ್ ಕೆನ್ನೆಗಾಕಿದ ಮೇಕಪ್ಪು
ಕಾಂಬಕಾತ್ ಬರೀ ತಂಪು ಕಣ್ಕಪ್ಪು
ಇದ್ದದೆ ನಾವ್ಗೆ ಸಾಯಮುಟ್ಟ
ಕಳ್ದ ವೊರ್ಸದ ಆ ನೆಂಪು...

# ‘ಗಡ’ಂತೇಳ್ರೆ ಎಂತ ಗಡ !

ಏ... ಕೂಸು ನೀನ್ ಗಡಿಗಡಿ ಬಿಸ್ಕೇಟ್
ಕೇಳ್ದು ಬೇಡಗಡ
ಹೈದಾ... ನೀನ್ ಚೆಡ್ಡಿಲಿ ಉರ್ಚಿಕಂಡ್ರೆ
ದೋಸ್ತಿಗ ನಿನ್ನ ಹತ್ರ ಬಾದುಲೆಗಡ
‘ಗೂಡೆ’ ಪೊರ್ಲಾಗಿ ಬೆಳ್ಳಂಗೆ ಉಟ್ಟುಗಡ
ಅವಳ ಪೋಲಿ ಬುದ್ದಿಂದಾಗಿ
ಅವ್ವ ಇಂವಂಗೆ ಬೇಡಗಡ
‘ಹೈದಂ’ಗೆ ಕೈತುಂಬಾ ಸಂಬಳ ಉಟ್ಟುಗಡ
ಅಂವ ಅದರ ಕುಡ್ದ್ ಹಾಳ್ ಮಾಡ್ದೆಗಡ
ಮಡಿಕೇರಿ ಸಂತೆಲಿ ಒಂದಿನ ಇಬ್ಬೊರು ಕಂಡೊಗಡ
ಹಣ್ಣ್ ತೆಗಿಯಕನ ಕೈ ಕೈ ಮುಟ್ಟಿತ್‌ಗಡ
ಕೆಳಗೆ ಕೈ ಮೇಲೆ ಕಣ್ಣ್ ಕಣ್ಣ್ ಸೇರ್ತ್‌ಗಡ
ಹೆಂಗೆ ಹೇಳ್ರೂ ಯವ್ವನಗಡ
ಎದೆಗಲ್ಲಿ ಪ್ರೀತಿನ ಹಕ್ಕಿಗೂಡು ಕಟ್ಟಿತ್‌ಗಡ
ಊರಿಡಿ ಟಾಂ ಟಾಂ ಆತ್‌ಗಡ
‘ಚಿಮ್ಮಿ’ ಗೂಡಗೆ ‘ಚಾಮಿ’ ಹೈದಗಡ
ಇಬ್ಬೊರಿಗೆ ನಿಚ್ಚಯ ಆತ್‌ಗಡ
ಪೊಗ್ಗು ಮೂವತಕ್ಕೆ ಮೊದ್ವೆಗಡ!
ಅಂಬೆರ್ಪಾಗಿ ಅಂಚೆಮನೆಲಿ ಕಾಗದ ನಂಗೆ ಕೊಟ್ಟೊಳೊಗಡ
ನಾನ್ ಮೊದ್ವೆಗೆ ಹೋಕೊಡ
ಮತ್ತೆ ಸತ್ತರೂ ಪರ್ವ ಇಲ್ಲೆಗಡ!!!
“ಇದ್ ಬರ್ಯಂವಂಗೊಂದು ಕವನ ಆತ್‌ಗಡ”

# ಹಳ್ಳಿ ಹೈದಂಗೊಂದು ಕೆಮಿ ಮಾತ್

ಹಳ್ಳಿಲಿ ಹುಟ್ಟಿದ ಮಜ ನೀನ್
ಓದಿ ಬರ್ದ್ ಕಲಿಯೊಕು ನೀನ್
ಪಟ್ಣಕೆ ಹೋಕುಂತಿಲ್ಲೆ ಸೀನ್
ಭೂಮಿ ತಾಯಿನ ಒಡ್ಲ್ ಬೆದ್ಕಿ ಬೇನ್ ॥

ಭೂಮಿ ಹಡ್ಲಾಗಿ ಬರ್ಡಾದರೆ
ಬರ ಬಂದದೆ ಬೊದ್ಕ್ ಬೆಂಡಾಗಿ
ನೀ ದುಡಿಯೊಕು ಮಜ
ಈ ಹಿರಿಯರ ಜಮ್ಮಲಿ ॥

ಹೆಣ್ಣೊಂದು ಸಿಕ್ಕಿದೆ ಪ್ರೀತಿಗೆ
ವಯಸಾದ ಅವ್ವನ ಆಸರೆಗೆ
ಗಂಡೊಂದು ದಕ್ಕಿದೆ ಕೀರ್ತಿಗೆ
ಹೆಣ್ಣೊಂದು ಹುಟ್ಟಿದೆ ಆರತಿಗೆ

ಹಳ್ಳಿಲಿ ಹುಟ್ಟಿದ ಮಜ ನೀನ್
ಮರ್ಯಕ್ಕಾಗದ್ ನಿನ್ನ ಅಪ್ಪ–ಅವ್ವನ
ಗೆಯ್ದ್ ಸವ್ನೊಕು ನಿನ್ನ ಯೌವ್ವನ
ಬೊದ್ಕಾಗಲಿ ನಿನ್ನದ್ ಪಾವನ

# ಹೆಣ್ಣ್ ಯಾರಾದರೇನ್

ಹೆಣ್ಣಂತೇಳ್ವ ಲಿಂಗ ಯಾವುದಾದರೇನ್?
ಅದಿಕೆ ಅದರದರ ಜಾಗೆ ಮುಖ್ಯ
ಅದರ್ದೆ ಆದ ಮಹತ್ವ ಉಟ್ಟು
ತರ ತರದ ಹಣ್ಣ್‌ಗ ಇದ್ದಂಗೆ ॥

ಹೈದಂಗೊಂದು ಬೇಕ್ ಗೂಡೆ
ಕೂಸುಗೊಂದು ಬೇಕ್ ಅವ್ವ
ಚಾಂಪನಾಸರೆಗೆ ಬೇಕ್ ಚಾಮೆವ್ವ
ಸಂತಾನ ಬೆಳ್ಸಿಕೆ ಬೇಕೊಂದು ಹೆಣ್ಣ್ ॥

ಲಕ್ಷ್ಮಿ ಇಲ್ಲದೆ ವಿಷ್ಣು ಇಲ್ಲೆ
ಪಾರ್ವತಿನ ಕೇಳದೆ ಶಿವ ಕುಣಿಯಕಿಲ್ಲೆ
ಪದ್ಮಾವತಿನ ಬುಟ್ಟ್ ವೆಂಕಟೇಶನ ಮಹಿಮೆ ಇಲ್ಲೆ
ಹೆಣ್ಣ್ ಇಲ್ಲದೆ ದೇವ್ರುನೂ ಇರ್ಕಿಲೆ ॥

ಸಾಲ ಮಾಡ್ತ್ ಗಂಡ
ಕುಡ್ದ್ ಬಾತ್ ಹೆಂಡ
ಇಂವ ಹೆಣ್ಣ್ ಬಾಕ ಭಂಡ
ಇಂವನ ಸಾಂಕಿಕೂ ಬೇಕೊಂದು
ಹೆಣ್ಣಂತೇಳ್ವ ಕೋಲು 'ದಂಡ' ॥

ಅತ್ತೆ – ಸೊಸೆಕ ನೀವೂ ಇರಿ
ಅವ್ವ – ಮಗಳಂಗೆ ಸರಿ
ಇದೇ ನಿಮ್ಮ ಸಂವ್ಸಾರದ ಸರಿದಾರಿ

## ನಂಬಿಕಾಕಿಲೆ

ಬರೆ ಕರೆ ಮನೆ
ನೆರೆಕರೆ ಗೂಡೆ
ಸೊರಬರ ಮೂಕು
ಚರಪರ ಸದ್ದ್
ಕರಕರ ಕಲ್ಲ್
ಇದನ ನಂಬಿಕಾಕಿಲೆ ಇರ್ಲ್॥

## ಸೊಂತದ್ ಏನೂ ಇಲ್ಲೆ

'ಸೊಂತದ್'ಂತೇಳಿ
ಏನೂ ಇಲ್ಲೆ!!
ಹುಟ್ಟಿಕೆ ಕಾರಣ
ಅಪ್ಪ-ಅವ್ವ ಆದರೆ
'ಜುಂವ' ಕೊಟ್ಟಂವ
ಆ ದೇವ್ರು!!!

# ಕೋಂಬರೆ ಸೇರ್ದ ಹೊಸ ಜೋಡಿ

ಮೊದುಮಗಳ ವಾರೆನೋಟ
ಕಕ್ಕುಳಿ ಇಸಿಟು ಅವನೆದೆಲಿ,
ತುಟಿ ಕಡೆಲಿ ಇಣ್ಕಿದ ಹೂ'ನೆಗೆ'
ಕೆಣ್ಕಿ ಕರ್ದುಟು ಕಟ್ಲ್‌ಗೆ

ಅವಳ ಕೈತಾಂಗಿ
ತಕಧಿಮಿ ಕೊಣ್ದುಟು
ಅಂವನ ಶರ್‍ರದ ನರಗ
ಹೂ ಹಾಸಿ ಕರ್ದುಟು ಕೊಡಿ ಕಣ್ಣ್‌ಲಿ

ತಬ್ಬಿದ ಬಿಗಿ ಹಿಡ್ತ
ಅವನ ಮೈ ಕೊತ ಕೊತ ಕೊದ್ದುಟು
ಅವ್ಳ ಕೊಟ್ಟ 'ಮುತ್ತು'ಲಿ
ಸೊರ್ಗಲಿ ವಾಲಾಡಿಟು 'ಮತ್ತ್'ಲಿ

ಕತ್ತಲೆಲಿ ಪ್ರೇಮಕಾವ್ಯ
ಮನ್ಮಥಲೀಲೆ ಬರ್ಯಕುಟ್ಟು
ಸರಸ, ವಿರಸ, ಸಮರಸದ
ಪಾಟ ಕಲ್ತ್ ಕವನ ಕೆತ್ತಿಕುಟ್ಟು

# ಮೊದ್ವೆ ಕಾಗದ

ಹೌದು! ಇದ್ ಬೊರೀ ಕಾಗದ ಅಲ್ಲ
ಜಲ್ಮ ಜಲ್ಮನ ಸೇರ್ಸುವ ಅನುಬಂಧ
ದೇವ್ರ ಹೆಸ್ರೇಳಿ ಬರ್ದ ನುಡಿ ಮುತ್ತುಗ
ಬಾಳ್‌ಲಿ ಒಮ್ಮೆ ಬರ್ವ ಹೊಸಬಾಳ್‌ನ –
ತಿಳ್ಸುವ ಈ 'ಮೊದ್ವೆ ಕಾಗದ'

ನೆಂಟ್ರ್, ನಾಡ್ ಬಂಧು ಬಾಂಧವರ
ಸೇರ್ಸುವ ಸಂಕ–ಪಾಲ – ಸೇತ್ಮೆ
ಹೃದ ಗೂಡೆಗಳ ಸೇರ್ಸುವ
ಮನ್ಸ್ ಬಯಕೆಗಳ ಪ್ರತಿಬಿಂಬ
'ತೊಳ್ಸಿ, ಗರ್ಕೆ'ನಷ್ಟೆ ಪರಿಶುದ್ಧದ ಈ ಮೊದ್ವೆ ಕಾಗದ

ಸೂರ್ಯ ಚಂದ್ರರ ಬಿಂಬಗ
ಬಂಗಾರದ ಗರಿಲಿ ಬರ್ದ ಅಕ್ಷರಗ
ಮೂಡಿ ಬಂದುಟು ಕಾಮನಬಿಲ್ಲ್‌ನ ಬಣ್ಣಲಿ
ಮದರಂಗಿ, ಧಾರೆ ದೇವಲೋಕದ ಸೃಷ್ಟಿ
ಮಲ್ಲಿಗೆ ಹೂವುನ ಪೊರ್ಮಳದ ಈ ಕಾಗದ

ಒಂಟಿ ಬಾಳ್‌ನ ನೇಗ್ಲ್ ಎಳಿಯಕೆ
ಜೋಡಿ ಜೋಡ್ಸುವ ಪಾಲ ಇದ್
ಶತ್ರುಗಳ ನೆಂಟ್ರಾಗ್ಸುವ ಮಹಾಮಂತ್ರ ಇದ್
ಪ್ರೇಮ ಪರಿಣಯ ಪರ್ಚಯದ ಕೊಂಡಿ
ಇದ್ ಅಮೃತಧಾರೆನ 'ಮೊದ್ವೆ ಕಾಗದ'

## **ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ**

ಅಧ್ಯಕ್ಷರು
**ಶ್ರೀ ಲಕ್ಷ್ಮೀನಾರಾಯಣ ಕಜೆಗದ್ದೆ**

**ಸದಸ್ಯರು**
ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ
ಶ್ರೀಮತಿ ಸ್ಮಿತಾ ಅಮೃತರಾಜ್
ಶ್ರೀಮತಿ ಚೊಕ್ಕಾಡಿ ಪ್ರೇಮ ರಾಘವಯ್ಯ
ಶ್ರೀ ಧನಂಜಯ ಅಗೋಳಿಕಜೆ
ಶ್ರೀ ದಂಬೆಕೋಡಿ ಎಸ್. ಆನಂದ
ಡಾ. ಕೂಡಕಂಡಿ ದಯಾನಂದ
ಶ್ರೀ ಕುಸುಮಾಧರ ಎ.ಟಿ.
ಡಾ. ವಿಶ್ವನಾಥ ಬದಿಕಾನ
ಶ್ರೀ ಜಯಪ್ರಕಾಶ್ ಮೋಂಟಡ್ಕ ಬಿಳಿನೆಲೆ
ಶ್ರೀ ಪುರುಷೋತ್ತಮ ಕಿರ್ಲಾಯ
ಡಾ. ಪುರುಷೋತ್ತಮ ಕೆ.ವಿ. ಕರಂಗಲ್ಲು
ಶ್ರೀ ಕಿರಣ್ ಕುಂಬಳಚೇರಿ
ಶ್ರೀ ಭರತೇಶ ಅಲಸಂಡೆಮಜಲು

ರಿಜಿಸ್ಟ್ರಾರ್
**ಶ್ರೀ ಚಿನ್ನಸ್ವಾಮಿ**



ಸಣ್ಣತ್ರ್‌ಂದ ಬಾಳ ಬಡತನಲಿ ಬೆಳ್ದ್, ಕೂಸಾಗಿರ್ಕನೇ ಅವ್ವನ ಕಳ್ಕಂಡ ಈ ಜುಂವ. ಕಷ್ಟಪಟ್ಟ್ ಓದಿ 1978ರಲ್ಲಿ ಭಾರತೀಯ ಭೂಸೇನೆಗೆ ಸೇರ್ಪಡೆ. ಅಲ್ಲಿ ಮದ್ದುಗುಂಡುಗಳ (Ammunititon) ಉಗ್ರಾಣದ ಉಸ್ತುವಾರಿನ ಜವಾಬ್ದಾರಿ. ಮುಂದೆ ಮದ್ದುಗುಂಡುಗಳ ದೊಡ್ಡ ಫಿರಂಗಿ ಗುಂಡುಗಳ ಪರೀಕ್ಷಣೆ, ನಿಷ್ಕ್ರಿಯತೆನ ಕೆಲ್ಸ. ದೇಶದ ಮೂಲೆ ಮೂಲೆಗ ಮತ್ತೆ ಎಲ್ಲಾ ಗಡಿಪ್ರದೇಶಗಲ್ಲಿ ಕೆಲ್ಸ ಮಾಡಿಕೆ ಅವಕಾಶ ಸಿಕ್ಕಿತ್. 1987ರಲ್ಲಿ ಶ್ರೀಲಂಕಾ ದೇಶಕ್ಕೆ ಶಾಂತಿಪಾಲನಾ ಪಡೆ ಸದಸ್ಯನಾಗಿ (IPKF) ಮದ್ದುಗುಂಡು ಸರಬರಾಜ್‌ನ ಹೊಣೆ. ಆಪರೇಷನ್ ಬ್ಲೂಸ್ಟಾರ್ (ಸ್ವರ್ಣ ಮಂದಿರ ಅಮೃತ್‌ಸರ)ಲಿ ಭಾಗಿ. ನೆಲ, ಜಲ, ವಾಯುಯಾನದ ರೋಚಕ ಅನುಭವ. 1996ರ್ಲಿ ಸ್ವಯಂ ನಿವೃತ್ತಿ.

ನಿವೃತ್ತಿ ಜೀವನನ ಕೂಡ್ಲೂರು ಚೆಟ್ಟಳ್ಳಿ ಗ್ರಾಮದ ಸೊಂತ ಮನೆಲಿ ಕಲಿತೊಳೊ. ಸಮೆ ಸಿಕ್ಕ್‌ಕನ ಓದುದು ಬರಿಯೊದು, ಅರೆಬಾಸೆಗೆ ಹೆಚ್ಚ್ ಒತ್ತು ಕೊಡ್ದು ಇವರ ಗುರಿ. ಶಾಲಾ ಸ್ಮರಣ ಸಂಚಿಕೆಲಿ ಭಾಗಿ. ಮಡಿಕೇರಿ ದಸರಾ ಕವಿಗೋಷ್ಠಿಲಿ ಅರೆಬಾಸೆ ಕವನ ವಾಚನ. ಕೊಡಗು ಸಂಗಾತಿ, ಮುಡ್ಪು, ಹಿಂಗಾರಲಿ ಅಲ್ಲಲ್ಲಿ ಸಣ್ಣ ಪುಟ್ಟ ಬರಹದ ಲೇಪನ. ಅರೆಬಾಸೆ ಅರ್ಥಕೋಶದ ತಯಾರಿಗೆ ಶಬ್ದಾರ್ಥಗಳ ಶೋಧ.

ಹಂಗೆನೇ ನಮ್ಮ ಬಾಸೆ ಬಾನೆತ್ತರಕೆ ಬೆಳ್ದ್ ಬೆಳ್ಗಲೀಂತ ಇವರ ಹಾರೈಕೆ.

**ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ**
ಮಡಿಕೇರಿ

ರೂ. 70